RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-IVA | ಬೆಂಗಳೂರು, ಶುಕ್ರವಾರ, ಮಾರ್ಚ್ ೯, ೨೦೧೮ (ಫಾಲ್ಗುಣ ೧೮, ಶಕ ವರ್ಷ ೧೯೩೯) | ನಂ. ೩೬೬ |
|---|---|---|
| Part-IVA | Bengaluru, Friday, March 9, 2018 (Phalguna 18, Shaka Varsha 1939) | No. 366 |


ಸಂಸದೀಯ ವ್ಯವಹಾರಗಳ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 08 ಶಾಸನ 2018, ಬೆಂಗಳೂರು, ದಿನಾಂಕ: 09.03.2018**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018ಕ್ಕೆ 2018ರ ಮಾರ್ಚ್ ತಿಂಗಳ ಏಳನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 09 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2018ರ ಕರ್ನಾಟಕ ಅಧಿನಿಯಮ ಸಂಖ್ಯೆ : 09**

(2018ರ ಮಾರ್ಚ್ ಒಂಭತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2018**

(2018ರ ಮಾರ್ಚ್ ಏಳನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಪಶ್ಚಿಮ ಘಟ್ಟಗಳ ಮತ್ತು ಕರ್ನಾಟಕ ಕರಾವಳಿಯ ಜೀವವೈವಿಧ್ಯತೆ, ಪರಂಪರೆ ಮತ್ತು ಸಂಸ್ಕೃತಿಯ ಸಂರಕ್ಷಣೆಗಾಗಿ ಮತ್ತು ವಿದ್ಯಾರ್ಥಿಗಳಲ್ಲಿ ವಿಜ್ಞಾನ ಕಲಿಕೆಗಾಗಿ ಉತ್ತೇಜಕ ಪರಿಸರವನ್ನು ಸೃಷ್ಟಿಸಲು ಹಾಗೂ ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ ಆಧಾರಿತ ಅಭಿವೃದ್ಧಿಗಳ ಬಗ್ಗೆ ಸಾಮಾನ್ಯ ಜನರಲ್ಲಿ ಅರಿವುಂಟು ಮಾಡಲು ಜೊತೆಗೆ ಅದಕ್ಕೆ ಸಂಬಂಧಿಸಿದ ಉದ್ದೇಶಗಳಿಗಾಗಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರಿನ ಪಿಲಿಕುಳ ಪ್ರದೇಶದಲ್ಲಿ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುವುದಕ್ಕಾಗಿ ಒಂದು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಪಶ್ಚಿಮ ಘಟ್ಟಗಳ ಮತ್ತು ಕರ್ನಾಟಕ ಕರಾವಳಿಯ ಜೀವವೈವಿಧ್ಯತೆ, ಪರಂಪರೆ ಮತ್ತು ಸಂಸ್ಕೃತಿಯ ಸಂರಕ್ಷಣೆಗಾಗಿ ಮತ್ತು ವಿದ್ಯಾರ್ಥಿಗಳಲ್ಲಿ ವಿಜ್ಞಾನ ಕಲಿಕೆಗಾಗಿ ಉತ್ತೇಜಕ ಪರಿಸರವನ್ನು ಸೃಷ್ಟಿಸಲು ಹಾಗೂ ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ ಆಧಾರಿತ ಅಭಿವೃದ್ಧಿಗಳ ಬಗ್ಗೆ ಸಾಮಾನ್ಯ ಜನರಲ್ಲಿ ಅರಿವುಂಟು ಮಾಡಲು ಜೊತೆಗೆ ಅದಕ್ಕೆ ಸಂಬಂಧಿಸಿದ ಉದ್ದೇಶಗಳಿಗಾಗಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರಿನ ಪಿಲಿಕುಳ ಪ್ರದೇಶದಲ್ಲಿ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುವುದಕ್ಕಾಗಿ ಒಂದು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

## ಅಧ್ಯಾಯ - I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಲಹಾ ಸಮಿತಿ" ಎಂದರೆ, 8ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ರಾಜ್ಯ ಮಟ್ಟದ ಸಲಹಾ ಸಮಿತಿ;

(ಬಿ) "ಸೌಕರ್ಯ" ಎಂಬುದರಲ್ಲಿ ರಸ್ತೆಗಳು, ಬೀದಿಗಳು, ಸುರಂಗ ಮಾರ್ಗಗಳು, ದೀಪದ ವ್ಯವಸ್ಥೆ, ಚರಂಡಿ ವ್ಯವಸ್ಥೆ, ನೈರ್ಮಲೀಕರಣ, ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಅಥವಾ ಇತರ ಅನುಕೂಲತೆಗಳು, ಲೋಕೋಪಯೋಗಿ ಕಾಮಗಾರಿಗಳು, ಮಾರುಕಟ್ಟೆ ಸ್ಥಳಗಳು, ಅಂಚೆ ಕಚೇರಿ, ಬ್ಯಾಂಕು, ಆಸ್ಪತ್ರೆಗಳು, ಚಿಕಿತ್ಸಾಲಯಗಳು, ಪೊಲೀಸು ಠಾಣೆಗಳು, ನ್ಯಾಯ ಬೆಲೆ ಅಂಗಡಿಗಳು,

ಹಾಲಿನ ಬೂತುಗಳು, ಗ್ರಂಥಾಲಯಗಳು, ಮನರಂಜನಾ ಕೇಂದ್ರಗಳು, ಪ್ರಾಧಿಕಾರವು ಅಧಿಕೃತಗೊಳಿಸಿದ ಯಾವುದೇ ಸಾರ್ವಜನಿಕ ಉಪಯುಕ್ತ ಸೇವೆಯ ಸೇವಾ ಕೇಂದ್ರಗಳು ಅಥವಾ ಇತರ ಸೌಲಭ್ಯ; ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸೌಕರ್ಯಗಳನ್ನು ಒಳಗೊಳ್ಳುತ್ತದೆ;

(ಸಿ) "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ;

(ಡಿ) "ಛೇರ್‌ಮನ್" ಎಂದರೆ, ಪ್ರಾಧಿಕಾರದ ಛೇರ್‌ಮನ್;

(ಇ) "ಆಯುಕ್ತರು" ಎಂದರೆ, 13ನೇ ಪ್ರಕರಣದ ಅಡಿಯಲ್ಲಿ ನೇಮಕವಾದ ಆಯುಕ್ತರು;

(ಎಫ್) ತನ್ನ ವ್ಯಾಕರಣ ವ್ಯತ್ಯಾಸಗಳೊಂದಿಗೆ "ಅಭಿವೃದ್ಧಿ" ಎಂದರೆ, ಯಾವುದೇ ಭೂಮಿಯ ಮೇಲೆ ಅಥವಾ ಕೆಳಗೆ ಕಟ್ಟಡಗಳ, ಇಂಜಿನಿಯರಿಂಗ್ ಅಥವಾ ಇತರ ಕಾರ್ಯಾಚರಣೆಗಳನ್ನು ಕೈಗೊಳ್ಳುವುದು ಅಥವಾ ಯಾವುದೇ ಕಟ್ಟಡ ಅಥವಾ ಭೂಮಿಯಲ್ಲಿ ಯಾವುದೇ ಅಥವಾ ಯಾವುದೇ ಕಟ್ಟಡ ಅಥವಾ ಭೂಮಿಯ ಬಳಕೆಯಲ್ಲಿ ವಾಸ್ತವಿಕ ಬದಲಾವಣೆಯನ್ನು ಮಾಡುವುದು ಮತ್ತು ಇದು ಸೌಕರ್ಯಗಳನ್ನು ಒಳಗೊಂಡಂತೆ ಮೂಲಸೌಕರ್ಯಗಳ ಮತ್ತು ಯಾವುದೇ ಭೂಮಿಯ ಸಂಬಂಧದಲ್ಲಿ ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಉತ್ತೇಜಿಸುವುದಕ್ಕೆ ಹೊಸ ಕಟ್ಟಡಗಳ ಪುನರ್ ಅಭಿವೃದ್ಧಿ ಮತ್ತು ಸ್ಥಾಪನೆಯನ್ನು ಒಳಗೊಳ್ಳುತ್ತದೆ;

(ಜಿ) "ನಿಧಿ" ಎಂದರೆ, ಪ್ರಾಧಿಕಾರದ ನಿಧಿ;

(ಎಚ್) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಐ) "ಸ್ಥಳೀಯ ಪ್ರಾಧಿಕಾರ" ಎಂದರೆ, ಮುನಿಸಿಪಲ್ ಕಾರ್ಪೊರೇಷನ್, ಮುನಿಸಿಪಲ್ ಕೌನ್ಸಿಲ್, ಟೌನ್ ಮುನಿಸಿಪಲ್ ಕೌನ್ಸಿಲ್, ಪಟ್ಟಣ ಪಂಚಾಯತ್, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ಸಿದ್ಧಪಡಿಸಲಾದ ಅಥವಾ ಸಿದ್ಧಪಡಿಸಿದ ಯೋಜನೆಯ ಪ್ರದೇಶದ ತನ್ನ ಸ್ಥಳೀಯ ಮಿತಿಗಳಲ್ಲಿ ಬರುವ ಯಾವುದೇ ಭೂಮಿ ಇದ್ದಲ್ಲಿ, ಸಂಬಂಧಪಟ್ಟ "ಸ್ಥಳೀಯ ಪ್ರಾಧಿಕಾರವು" ಸ್ಥಳೀಯ ಪ್ರಾಧಿಕಾರವಾಗತಕ್ಕದ್ದು.

(ಜೆ) "ಭೂಮಿಯು" ಭೂಮಿಗೆ ಲಗತ್ತಾದ ಭೂಮಿ ಅಥವಾ ಭೂಮಿಗೆ ಲಗತ್ತಾದ ಅಥವಾ ಶಾಶ್ವತವಾದ ಯಾವುದಕ್ಕಾದರೂ ಲಗತ್ತಾದ (fastened) ವಸ್ತುಗಳಿಂದ ಉದ್ಭವವಾಗುವ ಪ್ರಯೋಜನಗಳು;

(ಕೆ) "ನೈಸರ್ಗಿಕ ಪರಿಸರ"ವು ಪಿಲಿಕುಳ ಪ್ರದೇಶದಲ್ಲಿ ಇರುವ ನದಿಗಳು, ನದಿ ದಂಡೆಗಳು, ಬಂಡೆಗಳು, ನೀರಿನ ಮೂಲಗಳು, ವನ್ಯ ಜೀವಿಗಳು ಮತ್ತು ಸಸ್ಯವರ್ಗಗಳು (vegetation);

(ಎಲ್) "ಸದಸ್ಯ" ಎಂದರೆ, ಪ್ರಾಧಿಕಾರದ ಸದಸ್ಯ;

(ಎಂ) "ಪಿಲಿಕುಳ ಪ್ರದೇಶ" ಎಂದರೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪಿಲಿಕುಳ ನಿಸರ್ಗಧಾಮ ಪ್ರದೇಶ ಮತ್ತು ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ಘೋಷಿಸುವ ಅಂಥ ಇತರ ಪ್ರದೇಶವನ್ನು ಒಳಗೊಳ್ಳುತ್ತದೆ;

(ಎನ್) "ವಿನಿಯಮಗಳು" ಎಂದರೆ, 40ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರಾಧಿಕಾರದ ವಿನಿಯಮಗಳು;

(ಒ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿ;

(ಪಿ) "ಸೊಸೈಟಿ" ಎಂದರೆ, ಡಾ: ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಸೊಸೈಟಿ ಅಥವಾ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ; ಮತ್ತು

## ಅಧ್ಯಾಯ II

### ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ.-

**3. ಪ್ರಾಧಿಕಾರದ ರಚನೆ.-** (1) ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಪ್ರಾಧಿಕಾರವು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಪಿಲಿಕುಳದಲ್ಲಿ ತನ್ನ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರತಕ್ಕದ್ದು.

(3) ಪ್ರಾಧಿಕಾರವು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(4) ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| 1 | ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ | ಛೇರ್‌ಮನ್ |
| 2 | ವಿಧಾನ ಸಭಾ ಸದಸ್ಯರು, ಮಂಗಳೂರು ದಕ್ಷಿಣ, ಮಂಗಳೂರು ಉತ್ತರ ಮತ್ತು ಮೂಡುಬಿದರೆ ಚುನಾವಣಾ ಕ್ಷೇತ್ರಗಳು | ಸದಸ್ಯರು |
| 3 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಪದನಿಮಿತ್ತ ಸದಸ್ಯ |
| 4 | ಆಯುಕ್ತರು, ಪ್ರಾಚ್ಯವಸ್ತು ವಸ್ತು ಸಂಗ್ರಹಾಲಯ ಮತ್ತು ಪಾರಂಪರಿಕ ಇಲಾಖೆ | ಪದನಿಮಿತ್ತ ಸದಸ್ಯರು |
| 5 | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ದಕ್ಷಿಣ ಕನ್ನಡ | ಪದನಿಮಿತ್ತ ಸದಸ್ಯರು |
| 6 | ಪೋಲೀಸ್ ಆಯುಕ್ತರು, ಮಂಗಳೂರು | ಪದನಿಮಿತ್ತ ಸದಸ್ಯರು |
| 7 | ಆಯುಕ್ತರು, ಮಂಗಳೂರು ನಗರ ಪಾಲಿಕೆ | ಪದನಿಮಿತ್ತ ಸದಸ್ಯರು |
| 8 | ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು | ಪದನಿಮಿತ್ತ ಸದಸ್ಯರು |

| | | |
|---|---|---|
| 9 | ಮಹಾ ನಿರ್ದೇಶಕರು, ವಿಜ್ಞಾನ ವಸ್ತು ಸಂಗ್ರಹಾಲಯಗಳ ರಾಷ್ಟ್ರೀಯ ಪರಿಷತ್ತು, ಕೋಲ್ಕತ್ತಾ | ಪದನಿಮಿತ್ತ ಸದಸ್ಯರು |
| 10 | ಅರಣ್ಯ ಸಂರಕ್ಷಕ, ಮಂಗಳೂರು ವೃತ್ತ | ಪದನಿಮಿತ್ತ ಸದಸ್ಯರು |
| 11 | ನಿರ್ದೇಶಕರು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | ಪದನಿಮಿತ್ತ ಸದಸ್ಯರು |
| 12 | ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ | ಪದನಿಮಿತ್ತ ಸದಸ್ಯರು |
| 13 | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಪದನಿಮಿತ್ತ ಸದಸ್ಯರು |
| 14 | ನಿರ್ದೇಶಕರು, ತೋಟಗಾರಿಕೆ ಇಲಾಖೆ | ಪದನಿಮಿತ್ತ ಸದಸ್ಯರು |
| 15 | ಸದಸ್ಯ ಕಾರ್ಯದರ್ಶಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ | ಪದನಿಮಿತ್ತ ಸದಸ್ಯರು |
| 16 | ನಿರ್ದೇಶಕರು, ರಾಷ್ಟ್ರೀಯ ತಾಂತ್ರಿಕ ಸಂಸ್ಥೆ, ಕರ್ನಾಟಕ ಅಥವಾ ಆತನ ಪ್ರತಿನಿಧಿ | ಪದನಿಮಿತ್ತ ಸದಸ್ಯರು |
| 17 | ಕುಲ ಸಚಿವರು, ಮಂಗಳೂರು ವಿಶ್ವವಿದ್ಯಾಲಯ | ಪದನಿಮಿತ್ತ ಸದಸ್ಯರು |
| 18 | ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ | ಪದನಿಮಿತ್ತ ಸದಸ್ಯರು |
| 19 | ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ | ಪದನಿಮಿತ್ತ ಸದಸ್ಯರು |
| 20 | ಕ್ಯಾಪ್ಟನ್, ಪಿಲಿಕುಳ ಗಾಲ್ಫ್ ಕೋರ್ಸ್ | ಸದಸ್ಯರು |
| 21 | ಅಧ್ಯಕ್ಷರು, ಮೂಡುಷೆಡ್ಡೆ ಗ್ರಾಮ ಪಂಚಾಯತ್ | ಸದಸ್ಯರು |
| 22 | ಸರ್ಕಾರವು ನಾಮನಿರ್ದೇಶನ ಮಾಡುವ, ಸಂಸ್ಕೃತಿ, ವನ್ಯಜೀವಿ, ಸಸ್ಯಜೀವಿ, ವಿಜ್ಞಾನ, ತಂತ್ರಜ್ಞಾನ, ಪರಂಪರೆ, ಮೀನುಗಾರಿಕೆ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ತಜ್ಞರಾಗಿರುವ ಮೂವರು ಸದಸ್ಯರು | ಸರ್ಕಾರೇತರ ಸದಸ್ಯರು |
| 23 | ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

(5) ಪದನಿಮಿತ್ತ ಸದಸ್ಯರು ಪ್ರಾಧಿಕಾರದ ಸಭೆಗಳಿಗೆ ವೈಯಕ್ತಿಕವಾಗಿ ಹಾಜರಾಗಲು ಅಸಮರ್ಥರಾದ ಸಂದರ್ಭದಲ್ಲಿ ತಮ್ಮ ಪ್ರತಿನಿಧಿಗಳನ್ನು ನಾಮನಿರ್ದೇಶಿಸಬಹುದು.

4. **ಧ್ಯೇಯೋದ್ದೇಶಗಳು**:- ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಒಟ್ಟಾರೆ ಧ್ಯೇಯೋದ್ದೇಶವು ಕೇಂದ್ರವನ್ನು ಸಮಗ್ರ ಮತ್ತು ವೈಜ್ಞಾನಿಕ ಮಾರ್ಗದಲ್ಲಿ ಪ್ರವಾಸೋದ್ಯಮದ ಮೂಲಕ ವಿಜ್ಞಾನವನ್ನು ಕಲಿಯುವ ಮತ್ತು ವಿಜ್ಞಾನವನ್ನು ಪ್ರವಾಸೋದ್ಯಮದ ಮೂಲಕ ಕಲಿಯುವ ಅವಕಾಶವನ್ನು ಕಲ್ಪಿಸುವಂತೆ ಅಭಿವೃದ್ಧಿಪಡಿಸುವುದು. ವಿವರವಾದ ಧ್ಯೇಯೋದ್ದೇಗಳು ಈ ಮುಂದಿನಂತಿವೆ, ಎಂದರೆ:-

(i) ಮಾನವ ಕಲ್ಯಾಣಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವುದು;

(ii) ತಮ್ಮ ಅರಿವನ್ನು ಹೆಚ್ಚಿಸಿಕೊಳ್ಳಲು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಈ ಸಂಸ್ಥೆಯು ಜ್ಞಾನದ ಏಕಬಿಂದು ಕೇಂದ್ರವೆಂದು (One stop destination) ಉತ್ತಮವಾದ ಶೈಕ್ಷಣಿಕ ಮತ್ತು ಸಂಪನ್ಮೂಲ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದು;

(iii) ಪರಿಸರದ ವೈಜ್ಞಾನಿಕ ಮನೋಭಾವದ ಅರಿವು ಮತ್ತು ಅಭಿವೃದ್ಧಿಯನ್ನು ಉಂಟುಮಾಡುವುದು ಮತ್ತು ಪರಿಸರ ಶಿಕ್ಷಣ ಮತ್ತು ಪರಿಸರ ಪ್ರವಾಸೋದ್ಯಮವನ್ನು ಮತ್ತು ಸಾಮಾನ್ಯ ಜನರಲ್ಲಿ ಯೋಚನೆ ಮಾಡುವುದನ್ನು ಉತ್ತೇಜಿಸುವುದು;

(iv) ಜೀವವೈವಿಧ್ಯತೆಯ ಸಂರಕ್ಷಣೆ ಮಾಡುವುದು ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿಗಾಗಿ ಸೌಲಭ್ಯಗಳನ್ನು ಒದಗಿಸುವುದು;

(v) ಸಂಸ್ಕೃತಿ ಮತ್ತು ಪರಂಪರೆಯನ್ನು ರಕ್ಷಿಸುವುದು;

(vi) ವಿವಿಧ ಗುರಿಯುಳ್ಳ ಸಮೂಹಗಳಿಗಾಗಿ ವೈಜ್ಞಾನಿಕ ಮಾಹಿತಿ ಮತ್ತು ಉತ್ತಮ ಪದ್ಧತಿಗಳ ಪ್ರಸಾರ ಮಾಡುವುದು;

(vii) ವಿಶೇಷವಾಗಿ ಮಕ್ಕಳು ಮತ್ತು ಯುವಕರಲ್ಲಿ ಸೃಜನಾತ್ಮಕ ವೈಜ್ಞಾನಿಕ ಪ್ರತಿಭೆಯನ್ನು ಗುರುತಿಸುವುದು, ಪ್ರೋತ್ಸಾಹಿಸುವುದು ಮತ್ತು ಬೆಳೆಸುವುದು (nurture);

(viii) ರಾಜ್ಯದ ದೀರ್ಘಾವಧಿ ಅಭಿವೃದ್ಧಿಗೆ ಪ್ರಯೋಜನವಾಗುವ ವಿಜ್ಞಾನ ಮತ್ತು ತಂತ್ರಜ್ಞಾನದ ಆದ್ಯತಾ ಪ್ರದೇಶವನ್ನು ಗುರುತಿಸುವುದು;

(ix) ತರಬೇತಿ ಕೋರ್ಸುಗಳು, ಕಾರ್ಯಾಗಾರಗಳು, ಅಧ್ಯಯನ ಗೋಷ್ಠಿಗಳು, ಸಮ್ಮೇಳನಗಳು, ವಿಚಾರ ಗೋಷ್ಠಿಗಳು, ಆಹ್ವಾನಿತ ಭಾಷಣಗಳು, ಸಮಾಲೋಚನಾ ಸೇವೆಗಳು ಮತ್ತು ವಸ್ತುಪ್ರದರ್ಶನಗಳು ಇವುಗಳನ್ನು ಆಯೋಜಿಸುವುದು ಮತ್ತು /ಅಥವಾ ಆಯೋಜಿಸುವಲ್ಲಿ ನೆರವಾಗುವುದು;

(x) ಹ್ಯಾಂಡ್ಸ್-ಆನ್ ಮತ್ತು ಮೈಂಡ್ಸ್-ಆನ್ ಪರಿಕಲ್ಪನೆಯ ಮೂಲಕ ವಿಜ್ಞಾನ ಶಿಕ್ಷಣವನ್ನು ಪೂರಕಗೊಳಿಸುವುದು ಮತ್ತು ಪ್ರಯೋಗಗಳ ಮೂಲಕ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ವಿಚಾರಣೆಯ ಮತ್ತು ಸೃಜನಾತ್ಮಕ ಸ್ಫೂರ್ತಿಯನ್ನು ತುಂಬುವುದು;

(xi) ಖಗೋಳ ಶಾಸ್ತ್ರ ಆಧಾರಿತ ಶಿಕ್ಷಣ ಮತ್ತು ಬಾಹ್ಯಾಕಾಶ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯಂಥ ಸಂಬಂಧಿತ ವಿಭಾಗಗಳಲ್ಲಿ, ಆಸಕ್ತಿಯನ್ನು ಹುಟ್ಟಿಸುವುದರ ಮೂಲಕ ಮತ್ತು ಕಲಿಕೆಯ ಪರಿಸ್ಥಿತಿಯನ್ನು ಉತ್ತೇಜಿಸುವ ಮೂಲಕ ವಿದ್ಯಾರ್ಥಿಗಳು ಮತ್ತು ಸಾಮಾನ್ಯ ಜನರಲ್ಲಿ ಅದನ್ನು ಜನಪ್ರಿಯಗೊಳಿಸುವುದು;

(xii) ವಿಜ್ಞಾನ, ಅದರ ಇತಿಹಾಸ ಮತ್ತು ತತ್ವಶಾಸ್ತ್ರದ ಬಗ್ಗೆ ಪರಂಪರೆ ಮತ್ತು ಸಂಸ್ಕೃತಿಯೊಂದಿಗೆ ಒಂದು ಸಕಾರಾತ್ಮಕ ಅನುಭವವನ್ನು ಸೃಷ್ಟಿಸಿ ವಿಜ್ಞಾನವನ್ನು ಹರ್ಷದಾಯಕವಾಗಿ ಕಲಿಯುವುದು;

(xiii) ಸಮಾಜ ಅಧ್ಯಯನಗಳು, ಕಲೆ ಮತ್ತು ಸಂಸ್ಕೃತಿ ಒಳಗೊಂಡಂತೆ ಇತರ ಶೈಕ್ಷಣಿಕ ನವೀನಾತ್ಮಕ ಚಟುವಟಿಕೆಗಳಿಗಾಗಿ ವೇದಿಕೆಯನ್ನು ಕಲ್ಪಿಸುವುದು; ಮತ್ತು

(xiv) ಪ್ರವಾಸೋದ್ಯಮದ ಮೂಲಕ ವಿಜ್ಞಾನ ಮತ್ತು ವಿಜ್ಞಾನದ ಪರಿಕಲ್ಪನೆಯ ಮೂಲಕ ಪ್ರವಾಸೋದ್ಯಮದ ವಿಷಯದ ಮೂಲಕ ಪಿಲಿಕುಳದ ವಿವಿಧ ಅಂಶಗಳನ್ನು ಅನ್ವೇಷಿಸುವುದು.

**5. ಪದಾವಧಿ ಮತ್ತು ಸೇವಾ ಷರತ್ತುಗಳು.**- (1) ಸರ್ಕಾರದ ಇಚ್ಛೆಗೊಳಪಟ್ಟು, ಸರ್ಕಾರವು ನಾಮನಿರ್ದೇಶಿಸಿದ ಸರ್ಕಾರೇತರ ಸದಸ್ಯರು ಮೂರು ವರ್ಷಗಳ ಅವಧಿಗೆ ಪದಧಾರಣ ಮಾಡತಕ್ಕದ್ದು.

(2) ಯಾವೊಬ್ಬ ಸರ್ಕಾರೇತರ ಸದಸ್ಯನು ಲಿಖಿತದಲ್ಲಿ ತನ್ನ ಸಹಿಯೊಂದಿಗೆ ಪ್ರಾಧಿಕಾರದ ಅಧ್ಯಕ್ಷನಿಗೆ ಬರೆಯುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಆದರೆ ಸರ್ಕಾರವು ಆತನ ರಾಜೀನಾಮೆಯನ್ನು ಅಂಗೀಕರಿಸುವವರೆಗೆ ಆತನು ಪದದಲ್ಲಿ ಮುಂದುವರೆಯತಕ್ಕದ್ದು.

(3) ಸರ್ಕಾರೇತರ ಸದಸ್ಯರು ನಿಯಮಿಸಬಹುದಾದಂಥ ಭತ್ಯಗಳನ್ನು ಪಡೆಯತಕ್ಕದ್ದು.

**6. ನಾಮನಿರ್ದೇಶಿತ ಸದಸ್ಯನ ಪದಕ್ಕೆ ಅನರ್ಹತೆಗಳು.**- ಯಾವೊಬ್ಬ ವ್ಯಕ್ತಿಯು,-

(i) ಪ್ರಾಧಿಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ii) ಅಸ್ವಸ್ಥ ಚಿತ್ತದವನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(iii) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(iv) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ಒಂದು ಸಂಸ್ಥೆ ಅಥವಾ ನಿಗಮದ ಸೇವೆಯಿಂದ ತೆಗೆದು ಹಾಕಿದವನಾಗಿದ್ದರೆ ಅಥವಾ ವಜಾ ಮಾಡಿದವನಾಗಿದ್ದರೆ; ಅಥವಾ

(v) ಪ್ರಾಧಿಕಾರದ, ಆದೇಶದಿಂದ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಡನೆ ಅಥವಾ ಅದರ ಅಡಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾದ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವತಃ ಅವನು ಅಥವಾ ಪಾಲುದಾರನಾಗಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(vi) ಪ್ರಾಧಿಕಾರದ ಪರವಾಗಿ ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಪ್ರಾಧಿಕಾರದ ವಿರುದ್ಧವಾಗಿ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

- ಅವನು ಸದಸ್ಯನಾಗಿ ನೇಮಕ ಹೊಂದಲು ಅಥವಾ ಸದಸ್ಯರಾಗಿರಲು ಅನರ್ಹನಾರಾಗಿರತಕ್ಕದ್ದು:

ಪರಂತು, ಒಬ್ಬ ವ್ಯಕ್ತಿಯು, ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ಜಾಹೀರಾತನ್ನು ಸೇರಿಸಲಾದ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ (v)ನೇ ಖಂಡದ ಅಡಿಯಲ್ಲಿ ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂದು ಭಾವಿಸತಕ್ಕದ್ದಲ್ಲ.

**7. ಸದಸ್ಯನನ್ನು ತೆಗೆದು ಹಾಕುವುದು.**- ಸರ್ಕಾರವು, ಯಾವೊಬ್ಬ ಸದಸ್ಯನನ್ನು,-

(ಎ) ಆತನು 6ನೇ ಪ್ರಕರಣದಲ್ಲಿ ಹೇಳಲಾದ ಅನರ್ಹತೆಗಳಲ್ಲಿ ಯಾವುದೇ ಅನರ್ಹತೆಗೆ ಒಳಪಟ್ಟರೆ:

ಪರಂತು, ಯಾವೊಬ್ಬ ಸದಸ್ಯನನ್ನು, ಆತನು 6ನೇ ಪ್ರಕರಣದ (v)ನೇ ಖಂಡದಲ್ಲಿ ಹೇಳಲಾದ ಅನರ್ಹತೆಗೆ ಒಳಗಾಗಿದ್ದಾನೆಂಬ ಕಾರಣದ ಮೇಲೆ, ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ತೆಗೆದು ಹಾಕತಕ್ಕದ್ದಲ್ಲ; ಅಥವಾ

(ಬಿ) ಅವನು ಕಾರ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಅವನು ಗೈರು ಹಾಜರಾಗಲು ಪ್ರಾಧಿಕಾರದಿಂದ ಅನುಮತಿ ಪಡೆಯದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ:

ಪರಂತು, ಈ ಖಂಡವು ಪದನಿಮಿತ್ತ ಸದಸ್ಯರಿಗೆ ಅನ್ವಯವಾಗತಕ್ಕದ್ದಲ್ಲ; ಅಥವಾ

(ಡಿ) ಅವನನ್ನು ಆ ಪದದಲ್ಲಿ ಮುಂದುವರಿಸಿದರೆ, ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುವಂತೆ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವನೆಂದು ಸರ್ಕಾರವು ಅಭಿಪ್ರಾಯಪಟ್ಟರೆ,

- ಅವನನ್ನು ತೆಗೆದುಹಾಕತಕ್ಕದ್ದು:

ಪರಂತು, ಯಾವೊಬ್ಬ ಸದಸ್ಯನನ್ನು ಅವನಿಗೆ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ಹೊರತು ಈ ಖಂಡದ ಅಡಿಯಲ್ಲಿ ತೆಗೆದು ಹಾಕತಕ್ಕದ್ದಲ್ಲ.

**8. ಪ್ರಾಧಿಕಾರದ ಸಭೆಗಳು.**- (1) ಪ್ರಾಧಿಕಾರದ ಸಭೆಗಳನ್ನು ಚೇರ್‌ಮನ್‌ರವರು ಅಥವಾ ಚೇರ್‌ಮನ್ ರವರ ಪೂರ್ವಾನುಮೋದನೆಯೊಂದಿಗೆ ಆಯುಕ್ತರು ಕರೆಯತಕ್ಕದ್ದು ಮತ್ತು ಸಾಮಾನ್ಯವಾಗಿ ಇದು ಕನಿಷ್ಠ ಮೂರು ತಿಂಗಳಿಗೊಮ್ಮೆ, ಅಧ್ಯಕ್ಷರು

ನಿರ್ಧರಿಸಬಹುದಾದಂತೆ ಪ್ರಾಧಿಕಾರದ ಅಧಿಕಾರವ್ಯಾಪ್ತಿಯೊಳಗಿನ ಅಂಥ ಸ್ಥಳದಲ್ಲಿ ಅಥವಾ ಪ್ರಾಧಿಕಾರದ ಕೇಂದ್ರ ಕಾರ್ಯಸ್ಥಾನದಲ್ಲಿ ಮತ್ತು ಅಂತಹ ಅವಧಿಯಲ್ಲಿ ಸಭೆ ಸೇರತಕ್ಕದ್ದು.

(2) ಪ್ರಾಧಿಕಾರವು, ಈ ಅಧಿನಿಯಮದ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಂತೆ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ತನ್ನ ಸಭೆಗಳಲ್ಲಿ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದಂತೆ ಅಂಥ ವ್ಯವಹರಣೆಗಳ ನಿಯಮಗಳನ್ನು ಅನುಸರಿಸತಕ್ಕದ್ದು.

(3) ಪ್ರಾಧಿಕಾರದ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತಚಲಾಯಿಸುವ ಸದಸ್ಯರ ಬಹುಮತದ ಮೂಲಕ ನಿರ್ಧರಿಸತಕ್ಕದ್ದು ಮತ್ತು ಸಮಾನವಾದ ಮತಗಳಿದ್ದ ಸಂದರ್ಭದಲ್ಲಿ, ಚೇರ್‌ಮನ್‌ರವರು ಅಥವಾ ಅವರ ಗೈರುಹಾಜರಿಯಲ್ಲಿ ಅಧ್ಯಕ್ಷರಾಗಿರುವ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹಾಕುವ ಅಧಿಕಾರವನ್ನು ಚಲಾಯಿಸತಕ್ಕದ್ದು.

(4) ಪ್ರಾಧಿಕಾರದ ಯಾವುದೇ ಸಭೆಯಲ್ಲಿ, ಸದಸ್ಯನು, ನೇರವಾಗಿ ಅಥವಾ ತಾನಾಗಿಯೇ ಅಥವಾ ಆತನ ಪಾಲುದಾರ ಮೂಲಕ ಅಪ್ರತ್ಯಕ್ಷವಾಗಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದ ಯಾವುದೇ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ ಅಥವಾ ಮತಹಾಕತಕ್ಕದ್ದಲ್ಲ.

(5) ಪ್ರಾಧಿಕಾರದ ತೀರ್ಮಾನಗಳನ್ನು ಹಾಜರಿದ್ದು ಮತ ಹಾಕುವ ಸದಸ್ಯರ ಅವಿರೋಧ ಸಮ್ಮತಿ ಸೂಚಕ ಮೂಲಕ ಕೈಗೊಳ್ಳತಕ್ಕದ್ದು. ಪ್ರಾಧಿಕಾರದ ಮುಂದೆ ತೀರ್ಮಾನಕ್ಕಾಗಿ ಬಂದ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯಗಳಿದ್ದಲ್ಲಿ ಆಯುಕ್ತನು ಆ ವಿಷಯವನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ವಿಷಯಗಳ ಬಗ್ಗೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ನಿರ್ಣಾಯಕವಾಗಿರತಕ್ಕದ್ದು:

ಪರಂತು, ಪ್ರಾಧಿಕಾರವು ಕೈಗೊಂಡ ಯಾವುದೇ ನಿರ್ಣಯವು ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧವನ್ನು ಅಥವಾ ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಲಾದ ಅಥವಾ ಹೊರಡಿಸಿದ ಯಾವುದೇ ನಿಯಮ ಅಥವಾ ಅಧಿಸೂಚನೆ ಅಥವಾ ವಿನಿಯಮಗಳ ಉಪಬಂಧವನ್ನು ಅಥವಾ ರಾಜ್ಯ ಸರ್ಕಾರವು ಹೊರಡಿಸಿದ ಯಾವುದೇ ಆದೇಶವನ್ನು ಉಲ್ಲಂಘಿಸುತ್ತದೆಯೆಂದು ಅಥವಾ ಪ್ರಾಧಿಕಾರದ ಹಿತಾಸಕ್ತಿಗೆ ಅಥವಾ ಪಿಲಿಕುಳ ಪ್ರದೇಶದ ಅಭಿವೃದ್ಧಿ ಮತ್ತು ನಿರ್ವಹಣೆಗೆ ಕೆಡುಕು ಉಂಟುಮಾಡುತ್ತದೆ ಅಥವಾ ಹಾನಿಕಾರಕವಾಗುತ್ತದೆಯೆಂದು ಆಯುಕ್ತರು ಭಾವಿಸಿದರೆ, ಅವರು ನಿರ್ಣಯವನ್ನು ಅನುಮೋದಿಸಲಾದ ಹದಿನೈದು ದಿನಗಳ ಒಳಗಾಗಿ ವಿಷಯದ ಬಗ್ಗೆ ಆದೇಶಗಳನ್ನು ಕೋರಿ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಪ್ರಾಧಿಕಾರದ ಮುಂದಿನ ಸಭೆಯಲ್ಲಿ ತಾನು ಕೈಗೊಂಡ ಕ್ರಮದ ಬಗ್ಗೆ ತಿಳಿಸತಕ್ಕದ್ದು ಮತ್ತು ಆಯುಕ್ತನು, ಕಳುಹಿಸಿಕೊಟ್ಟ ಅಂತಹ ವಿಷಯ ಬಗ್ಗೆ ಸರ್ಕಾರವು ಆದೇಶವನ್ನು ನೀಡುವವರೆಗೆ ಆ ನಿರ್ಣಯವನ್ನು ಜಾರಿಗೆ ತರಲು ಬದ್ಧನಾಗಿರತಕ್ಕದ್ದಲ್ಲ.

9. **ರಾಜ್ಯ ಮಟ್ಟದ ಸಲಹಾ ಸಮಿತಿ.–** (1) ಈ ಮುಂದಿನ ಸದಸ್ಯರನ್ನೊಳಗೊಂಡ ರಾಜ್ಯ ಮಟ್ಟದ ಸಲಹಾ ಸಮಿತಿಯು ಇರತಕ್ಕದ್ದು, ಎಂದರೆ:–

| | | |
|---|---|---|
| 1 | ವಿಜ್ಞಾನ ಮತ್ತು ತಾಂತ್ರಿಕ ಪ್ರಭಾರ ಮಂತ್ರಿಗಳು | ಅಧ್ಯಕ್ಷರು |
| 2 | ದಕ್ಷಿಣ ಕನ್ನಡ ಜಿಲ್ಲೆಯ ಪ್ರಭಾರ ಮಂತ್ರಿಗಳು | ಸಹಾಧ್ಯಕ್ಷರು |
| 3 | ಪ್ರವಾಸೋದ್ಯಮ ಮಂತ್ರಿಗಳು | ಸಹಾಧ್ಯಕ್ಷರು |
| 4 | ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು | ಸದಸ್ಯರು |
| 5 | ಮಂಗಳೂರು ದಕ್ಷಿಣ, ಮಂಗಳೂರು ಉತ್ತರ ಮತ್ತು ಮೂಡುಬಿದರೆ ಚುನಾವಣಾ ಕ್ಷೇತ್ರಗಳ ವಿಧಾನ ಸಭೆ ಸದಸ್ಯರು | ಸದಸ್ಯರು |
| 6 | ಮಂಗಳೂರು ದಕ್ಷಿಣ, ಮಂಗಳೂರು ಉತ್ತರ ಮತ್ತು ಮೂಡುಬಿದರೆ ಚುನಾವಣಾ ಕ್ಷೇತ್ರಗಳಲ್ಲಿ ಮತದಾರರೆಂದು ನೋಂದಾಯಿತರಾದ ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 7 | ಅಧ್ಯಕ್ಷರು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ | ಸದಸ್ಯರು |
| 8 | ಮಹಾಪೌರರು, ಮಂಗಳೂರು ನಗರ ಪಾಲಿಕೆ | ಸದಸ್ಯರು |
| 9 | ಅಧ್ಯಕ್ಷರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು | ಸದಸ್ಯರು |
| 10 | ಅಭಿವೃದ್ಧಿ ಆಯುಕ್ತರು ಮತ್ತು ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |
| 11 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ | ಪದನಿಮಿತ್ತ ಸದಸ್ಯರು |
| 12 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ | ಪದನಿಮಿತ್ತ ಸದಸ್ಯರು |
| 13 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಇಂಧನ ಇಲಾಖೆ | ಪದನಿಮಿತ್ತ ಸದಸ್ಯರು |
| 14 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಅರಣ್ಯ, ವನ್ಯಜೀವಿ ಮತ್ತು ಪರಿಸರ ಇಲಾಖೆ | ಪದನಿಮಿತ್ತ ಸದಸ್ಯರು |
| 15 | ಕಾರ್ಯದರ್ಶಿ, ಭಾರತ ಸರ್ಕಾರ, ಪರಿಸರ ಮತ್ತು ಅರಣ್ಯ ಮಂತ್ರಾಲಯ ಅಥವಾ ಆತನ ಪ್ರತಿನಿಧಿ | ಪದನಿಮಿತ್ತ ಸದಸ್ಯರು |
| 16 | ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಮಾಹಿತಿ ತ್ರಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | ಪದನಿಮಿತ್ತ ಸದಸ್ಯರು |

| | | |
|---|---|---|
| 17 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | ಪದನಿಮಿತ್ತ ಸದಸ್ಯರು |
| 18 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಮತ್ತು ಪ್ರೌಢ ಶಿಕ್ಷಣ) | ಪದನಿಮಿತ್ತ ಸದಸ್ಯರು |
| 19 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ | ಪದನಿಮಿತ್ತ ಸದಸ್ಯರು |
| 20 | ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಪದನಿಮಿತ್ತ ಸದಸ್ಯರು |
| 21 | ಸರ್ಕಾರದ ಕಾರ್ಯದರ್ಶಿ, ಮೀನುಗಾರಿಕೆ ಇಲಾಖೆ | ಪದನಿಮಿತ್ತ ಸದಸ್ಯರು |
| 22 | ಸರ್ಕಾರದ ಕಾರ್ಯದರ್ಶಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆ | ಪದನಿಮಿತ್ತ ಸದಸ್ಯರು |
| 23 | ಜಿಲ್ಲಾಧಿಕಾರಿ, ಮಂಗಳೂರು | ಪದನಿಮಿತ್ತ ಸದಸ್ಯರು |
| 24 | ಕುಲಪತಿ, ಮಂಗಳೂರು ವಿಶ್ವವಿದ್ಯಾಲಯ | ಪದನಿಮಿತ್ತ ಸದಸ್ಯರು |
| 25 | ಮಹಾ ನಿರ್ದೇಶಕರು, ವಿಜ್ಞಾನ ವಸ್ತುಸಂಗ್ರಹಾಲಯದ ರಾಷ್ಟ್ರೀಯ ಪರಿಷತ್ತು | ಪದನಿಮಿತ್ತ ಸದಸ್ಯರು |
| 26 | ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | ಪದನಿಮಿತ್ತ ಸದಸ್ಯರು |
| 27 | ಸರ್ಕಾರವು ನಾಮನಿರ್ದೇಶನ ಮಾಡುವ, ಸಂಸ್ಕೃತಿ, ವನ್ಯಜೀವಿ, ಸಸ್ಯಜೀವಿ, ವಿಜ್ಞಾನ, ತಂತ್ರಜ್ಞಾನ, ಪರಿಸರ, ಪರಂಪರೆ, ಮೀನುಗಾರಿಕೆ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ತಜ್ಞರಾಗಿರುವ ಮೂವರು ಸದಸ್ಯರು | ಸರ್ಕಾರೇತರ ಸದಸ್ಯರು |
| 28 | ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ |

(2) ಸಲಹಾ ಸಮಿತಿಯು ತಾನು ಅವಶ್ಯವೆಂದು ಭಾವಿಸಿದಲ್ಲಿ ಸಂಸ್ಕೃತಿ, ವನ್ಯ ಜೀವಿ, ಸಸ್ಯ ವರ್ಗ, ವಿಜ್ಞಾನ, ತಂತ್ರಜ್ಞಾನ, ಪರಿಸರ, ಪರಂಪರೆ, ಮೀನುಗಾರಿಕೆ, ಪ್ರವಾಸೋದ್ಯಮ ಮತ್ತು ಇತರ ಸಂಬಂಧಿತ ಕ್ಷೇತ್ರಗಳಲ್ಲಿ ತಜ್ಞರಾಗಿರುವ ಯಾವೊಬ್ಬ ವ್ಯಕ್ತಿಯನ್ನು ಆಹ್ವಾನಿಸಬಹುದು.

(3) ಸಲಹಾ ಸಮಿತಿಯು ಪ್ರಾಧಿಕಾರದ ಚಟುವಟಿಕೆಗಳನ್ನು ಸಂಯೋಜಿಸತಕ್ಕದ್ದು ಮತ್ತು ಮೇಲ್ವಿಚಾರಣೆ ಮಾಡತಕ್ಕದ್ದು ಹಾಗೂ ಪಶ್ಚಿಮ ಘಟ್ಟಗಳ ಮತ್ತು ಕರ್ನಾಟಕ ಕರಾವಳಿಯ ಜೀವವೈವಿಧ್ಯತೆ ಪರಂಪರೆ ಮತ್ತು ಸಂಸ್ಕೃತಿಯನ್ನು ರಕ್ಷಿಸುವುದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಪ್ರಾಧಿಕಾರಕ್ಕೆ ಸಲಹೆಯನ್ನು ನೀಡತಕ್ಕದ್ದು ಹಾಗೆಯೇ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕಲಿಯುವುದಕ್ಕಾಗಿ ಉತ್ತೇಜಕ ಪರಿಸರವನ್ನು ಸೃಷ್ಟಿಸುವುದು ಮತ್ತು ಪ್ರಾಧಿಕಾರದೊಳಗೆ ಪ್ರವಾಸೋದ್ಯಮವನ್ನು ಉತ್ತೇಜಿಸುವುದು ಒಳಗೊಂಡಂತೆ ಸಾಮಾನ್ಯ ಜನರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯ ಬಗ್ಗೆ ಅರಿವನ್ನು ಉಂಟುಮಾಡುವುದು.

(4) ಪ್ರಾಧಿಕಾರದ ಆಯುಕ್ತನು ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ಸ್ಥಳದಲ್ಲಿ ಮತ್ತು ಅಂಥ ಸಮಯದಲ್ಲಿ ಕನಿಷ್ಠ ಆರು ತಿಂಗಳಿಗೊಮ್ಮೆ ಸಮಿತಿಯ ಸಭೆಯನ್ನು ಕರೆಯತಕ್ಕದ್ದು ಮತ್ತು ಅಂಥ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳತಕ್ಕದ್ದು.

(5) ಪ್ರಾಧಿಕಾರದ ಚೇರ್‌ಮನ್‌ರವರು ಸಲಹಾ ಸಮಿತಿಯ ಮುಂದೆ ಅಭಿವೃದ್ಧಿ ಯೋಜನೆಯನ್ನು ಹಾಜರುಪಡಿಸತಕ್ಕದ್ದು ಮತ್ತು ಹಿಂದಿನ ವರ್ಷದ ಲೆಕ್ಕಪತ್ರಗಳನ್ನು ಮತ್ತು ಪ್ರಸ್ತುತ ವರ್ಷದ ಆಯವ್ಯಯವನ್ನು ಮಂಡಿಸತಕ್ಕದ್ದು.

(6) ಸಲಹಾ ಸಮಿತಿಯು ಹಿಂದಿನ ವರ್ಷದ ಪರಿಶೋಧಿತ ಲೆಕ್ಕಪತ್ರಗಳನ್ನು, ಪ್ರಸ್ತುತ ವರ್ಷದ ಆಯವ್ಯಯವನ್ನು ಮತ್ತು ಪ್ರಾಜೆಕ್ಟ್‌ನ ವಾರ್ಷಿಕ ಅಭಿವೃದ್ಧಿ ಯೋಜನೆಯನ್ನು ಗಮನಿಸತಕ್ಕದ್ದು.

(7) ಸಲಹಾ ಸಮಿತಿಯು ಪ್ರಾಧಿಕಾರದ ವಿವಿಧ ಪ್ರಾಜೆಕ್ಟ್‌ಗಳನ್ನು ನಿರ್ವಹಿಸುವಾಗ ಮತ್ತು ಮೇಲ್ವಿಚಾರಣೆ ಮಾಡುವಾಗ ಯುಕ್ತ ಆದ್ಯತೆಯನ್ನು ನೀಡಬೇಕಾದ ಪ್ರಾಜೆಕ್ಟ್, ಹಣಕಾಸು, ಆಡಳಿತದ ಅಭಿವೃದ್ಧಿಯ ನಿಬಂಧನೆಗಳಿಗೆ ಸಲಹೆಯನ್ನು ನೀಡತಕ್ಕದ್ದು.

(8) ಸಲಹಾ ಸಮಿತಿಯ ನಿರ್ಧಾರಗಳನ್ನು ಸಾಮಾನ್ಯವಾಗಿ ಪ್ರಾಧಿಕಾರವು ಅಳವಡಿಸಿಕೊಳ್ಳತಕ್ಕದ್ದು. ಯಾವುವೇ ಕಾರಣಗಳಿಗಾಗಿ ಪ್ರಾಧಿಕಾರವು ಸಲಹೆಗಳನ್ನು ಅನುಷ್ಠಾನಗೊಳಿಸದಿದ್ದಲ್ಲಿ ಪ್ರಾಧಿಕಾರವು ಕಾರಣಗಳೊಂದಿಗೆ ಸಲಹಾ ಸಮಿತಿಗೆ ಹಿಂತಿರುಗಿಸತಕ್ಕದ್ದು. ಹೇಳಲಾದ ಕಾರಣಗಳನ್ನು ಸಲಹಾ ಸಮಿತಿಯು ಒಪ್ಪದಿದ್ದಲ್ಲಿ ವಿಷಯವನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು. ಅಂಥ ಎಲ್ಲಾ ಪ್ರಕರಣಗಳಲ್ಲಿ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**10. ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು.**–(1) ಪ್ರಾಧಿಕಾರವು, ಅಧಿನಿಯಮದ ಇತರ ಪ್ರಾಧಿಕಾರಗಳು ನಿರ್ವಹಿಸಬೇಕೆಂದು ನಿರ್ದಿಷ್ಟವಾಗಿ ಹೇಳಲಾದ ಅಂಥ ಕ್ರಮಗಳನ್ನು ಹೊರತುಪಡಿಸಿ, ಈ ಅಧಿನಿಯಮದ ಉದ್ದೇಶ ಮತ್ತು ಉಪಬಂಧಗಳನ್ನು ಮಾಡುವುದಕ್ಕೆ ಅಥವಾ ಜಾರಿಗೊಳಿಸುವುದಕ್ಕೆ ಅವಶ್ಯವೆಂದು ತಾನು ಭಾವಿಸುವ ಯಾವುದನ್ನಾದರೂ ಮಾಡುವ ಅಧಿಕಾರವನ್ನು ಸಾಮಾನ್ಯವಾಗಿ ಹೊಂದಿರತಕ್ಕದ್ದು.

(2) ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೊಳಪಟ್ಟು, ಪ್ರಾಧಿಕಾರದ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು, ಎಂದರೆ:–

(i) ಪ್ರಾಧಿಕಾರದ ಎಲ್ಲಾ ವ್ಯವಹಾರಗಳು, ನಿಧಿ ಮತ್ತು ಸ್ವತ್ತುಗಳನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿರ್ವಹಿಸುವುದು;

(ii) ಸರ್ಕಾರದ ಅನುಮೋದನೆಯೊಂದಿಗೆ ಖಾಯಂ ಅಥವಾ ತಾತ್ಕಾಲಿಕ ಆಧಾರದ ಮೇಲೆ ಪ್ರಾಧಿಕಾರದಲ್ಲಿನ ವಿವಿಧ ವೃಂದಗಳ ಎಲ್ಲಾ ಹುದ್ದೆಗಳನ್ನು ಮಂಜೂರು ಮಾಡುವುದು;

(iii) ಪ್ರಾಧಿಕಾರದ ಸಮಿತಿಗಳ ಅಥವಾ ಉಪ ಸಮಿತಿಗಳ ಚೇರ್‌ಮನ್‌ರವರು ಮತ್ತು ಸದಸ್ಯರನ್ನು ನೇಮಕ ಮಾಡುವುದು;

(iv) ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (1999ರ ಕರ್ನಾಟಕ ಅಧಿನಿಯಮ12) ಅನುಸಾರವಾಗಿ ಪ್ರಾಧಿಕಾರಕ್ಕಾಗಿ ಟೆಂಡರುಗಳನ್ನು ಕರೆಯುವ ಅಥವಾ ತೆಗೆದುಕೊಳ್ಳಬೇಕಾದ ಸೇವೆಗಳಿಗಾಗಿ ನಿಯಮಿಸಬಹುದಾದ ಅಂಥ ಮಿತಿಯೊಳಗೆ ಎಲ್ಲಾ ಕಾಮಗಾರಿಗಳಿಗಾಗಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವುದು;

(v) ಪ್ರಾಧಿಕಾರದ ಉದ್ದೇಶಗಳಿಗೆ ಮತ್ತು ಈ ಅಧಿನಿಯಮದ ಹಾಗೂ ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಂತೆ, ಸ್ಥಿರ ಮತ್ತು ಚರ ಸ್ವತ್ತುಗಳು ಅಥವಾ ಯಾವುದೇ ಹಾಜರುಪಡಿಸಲಾದ ಹೊಣೆಗಾರಿಕೆಗಳು ಮತ್ತು ವ್ಯವಸ್ಥೆಗಳೊಂದಿಗೆ ಇತರ ನಿಧಿಗಳು, ಸರ್ಕಾರ ಮತ್ತು ಇತರ ಸಾರ್ವಜನಿಕ ನಿಕಾಯಗಳು ಅಥವಾ ಖಾಸಗಿ ವ್ಯಕ್ತಿಗಳಿಂದ ಯಾರಿಂದಲಾದರೂ ಖರೀದಿ, ದಾನ, ವಿನಿಮಯ, ಗುತ್ತಿಗೆ, ಬಾಡಿಗೆ ಅಥವಾ ಅನ್ಯಥಾ ಮೂಲಕ ಭೂಮಿಯನ್ನು ಆರ್ಜಿಸುವುದು;

(vi) ಪ್ರಾಧಿಕಾರದ ಪರವಾಗಿ ಒಪ್ಪಂದಗಳು, ಕರಾರುಗಳು ಮತ್ತು ದಸ್ತಾವೇಜುಗಳನ್ನು ಸಮಾಲೋಚಿಸುವುದು, ಮಾಡುವುದು ಮತ್ತು ಕಾರ್ಯಗತಗೊಳಿಸುವುದು ಹಾಗೂ ಅಂಥ ಒಪ್ಪಂದಗಳು, ಕರಾರುಗಳು ಮತ್ತು ದಸ್ತಾವೇಜುಗಳನ್ನು ವ್ಯತ್ಯಾಸಗೊಳಿಸುವುದು ಹಾಗೂ ಹಿಂಪಡೆಯುವುದು;

(vii) ಪ್ರಾಧಿಕಾರದ ಬಾಂಡುಗಳು, ಡಿಬೆಂಚರುಗಳು ಅಥವಾ ಇತರ ಹೊಣೆಗಾರಿಕೆಗಳು ಅಥವಾ ಭದ್ರತೆಗಳ ಮೇಲೆ ಅಥವಾ ಪ್ರಾಧಿಕಾರದ ಯಾವುದೇ ಸ್ಥಿರ ಅಥವಾ ಚರ ಆಸ್ತಿಗಳನ್ನು ಅಡಮಾನ ಮಾಡುವ ಮೂಲಕ, ಆಧಾರ ಮಾಡುವ ಅಥವಾ ಒತ್ತೆ ಇಡುವ ಮೂಲಕ ಪ್ರಾಧಿಕಾರದ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದ ಸಾಲಪಡೆಯಬಹುದು ಅಥವಾ ಹಣವನ್ನು ಎತ್ತಬಹುದು;

(viii) ಪ್ರತಿ ಮೂರು ತಿಂಗಳಿಗೊಮ್ಮೆ ಹಣಕಾಸು ಲೆಕ್ಕಪತ್ರಗಳನ್ನು ಪರಿಶೀಲಿಸುವುದು ಮತ್ತು ಲೆಕ್ಕಪತ್ರಗಳನ್ನು ಅಂಗೀಕರಿಸುವುದು;

(ix) ಪ್ರಾಧಿಕಾರವು ನಿರ್ಧರಿಸಬಹುದಾದ ಅಂಥ ಉದ್ದೇಶಗಳಿಗಾಗಿ ಮತ್ತು ಅಂಥ ಅಧಿಕಾರಗಳೊಂದಿಗೆ ಅಂಥ ಇತರ ಸಲಹಾ ಮಂಡಳಿಗಳು ಮತ್ತು ಇತರ ವಿಶೇಷ ಸಮಿತಿಗಳನ್ನು ನೇಮಿಸುವುದು ಮತ್ತು ಹಾಗೆ ರಚಿಸಲಾದ ಯಾವುದೇ ಸಮಿತಿಗಳು ಮತ್ತು ಸಲಹಾ ಸಮಿತಿಗಳನ್ನು ವಿಘಟನೆ ಮಾಡುವುದು;

(x) ಪ್ರಾಧಿಕಾರವು ತಾನು ಸೂಕ್ತವೆಂದು ಭಾವಿಸುವ ಅಂಥ ಆಡಳಿತಾತ್ಮಕ, ಹಣಕಾಸು ಅಥವಾ ಇತರ ಅಧಿಕಾರಗಳನ್ನು ಪ್ರಾಧಿಕಾರದ ಯಾವುದೇ ಸಮಿತಿ ಅಥವಾ ಅಧಿಕಾರಿಗೆ ಪ್ರತ್ಯಾಯೋಜಿಸುವುದು ಮತ್ತು ಈ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಚಲಾಯಿಸಬೇಕಾದ ಅಥವಾ ನಿರ್ವಹಿಸಬೇಕಾದ ಮಿತಿಗಳನ್ನು ಕೂಡ ನಿಯಮಿಸುವುದು ಹಾಗೂ ಈ ಬಗ್ಗೆ ಮಾರ್ಗಸೂಚಿಗಳನ್ನು ಒದಗಿಸುವುದು;

(xi) ಪ್ರಾಧಿಕಾರ ಅಥವಾ ಅದರ ಅಧಿಕಾರಿಗಳ ಅಥವಾ ಅನ್ಯಥಾ ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಅಥವಾ ಅವರ ವಿರುದ್ಧ ಯಾವುದೇ ಕಾನೂನು ವ್ಯವಹರಣೆಗಳನ್ನು ಹೂಡುವುದು, ನಡೆಸುವುದು, ಜೋಡಿಸುವುದು ಅಥವಾ ರದ್ದುಗೊಳಿಸುವುದು ಮತ್ತು ಪ್ರಾಧಿಕಾರದ ಮೂಲಕ ಅಥವಾ ಅದರ ವಿರುದ್ಧ ಯಾವುದೇ ಬಾಕಿ ಇರುವ ಋಣಗಳು ಮತ್ತು ಯಾವುದೇ ಕ್ಲೇಮುಗಳ ಅಥವಾ ಬೇಡಿಕೆಗಳ ಪಾವತಿಗಾಗಿ ಅಥವಾ ತೀರ್ಮಾನಕ್ಕಾಗಿ ರಾಜೀ ಮಾಡಿಕೊಳ್ಳುವುದು ಮತ್ತು ಸಮಯವನ್ನು ನೀಡುವುದು ಮತ್ತು ಯಾವುದೇ ವ್ಯತ್ಯಾಸಗಳು ಅಥವಾ ಮಧ್ಯಸ್ಥಿಕೆಗಳನ್ನು ಉಲ್ಲೇಖಿಸುವುದು ಹಾಗೂ ಅದರ ಮೇಲೆ ಮಾಡಲಾದ ಯಾವುದೇ ಐತೀರ್ಪನ್ನು ಪಾಲಿಸುವುದು ಮತ್ತು ನಿರ್ವಹಿಸುವುದು;

(xii) ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಧ್ಯೇಯೋದ್ದೇಶಗಳನ್ನು ಈಡೇರಿಸಲು ಪ್ರಾಸಂಗಿಕವಾದ ಅಥವಾ ನೆರವಾಗುವ ಅಂಥ ಎಲ್ಲಾ ಕ್ರಮಗಳು, ಕಾರ್ಯಗಳು, ವಿಷಯಗಳು ಮತ್ತು ಕರ್ತವ್ಯಗಳನ್ನು ಮಾಡುವುದು;

(xiii) ಈ ಮುಂದಿನವುಗಳನ್ನು ಚರ್ಚಿಸುವುದು ಮತ್ತು ಅಂಗೀಕರಿಸುವುದು ಅಥವಾ ಅನುಮೋಸುವುದು,–

(ಎ) ವಾರ್ಷಿಕ ಆಯವ್ಯಯ;

(ಬಿ) ವಾರ್ಷಿಕ ಕ್ರಿಯಾಯೋಜನೆ;

(ಸಿ) ವಾರ್ಷಿಕ ಆಡಳಿತಾತ್ಮಕ ವರದಿ; ಮತ್ತು

(ಡಿ) ವಾರ್ಷಿಕ ಲೆಕ್ಕಪರಿಶೋಧನಾ ವರದಿ.

(xiv) ಸಮಿತಿಗಳು, ಸಲಹಾ ನಿಕಾಯಗಳ ಯಾವುದೇ ನಿರ್ಧಾರಗಳು ಅಥವಾ ವರದಿಗಳನ್ನು ಬದಲಾಯಿಸುವುದು, ಒಪ್ಪುವುದು ಅಥವಾ ತಿರಸ್ಕರಿಸುವುದು ಮತ್ತು ಪ್ರಾಧಿಕಾರದ ಹಿತಾಸಕ್ತಿಯಲ್ಲಿ ಸಮಿತಿಗಳಿಗೆ ನಿರ್ದೇಶನಗಳನ್ನು ನೀಡುವುದು;

(xv) ಹಣಕಾಸು ಸಂಪನ್ಮೂಲಗಳನ್ನು ಹೆಚ್ಚಿಸುವ ವಿಷಯಗಳನ್ನು ನಿರ್ಧರಿಸುವುದು ಮತ್ತು ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳನ್ನು ಸಮತೋಲನಗೊಳಿಸುವುದು;

(xvi) ಪ್ರಾಧಿಕಾರದ ಸ್ವತ್ತುಗಳ ಸುರಕ್ಷತೆ ಮತ್ತು ಭದ್ರತೆಯ ವಿಷಯಗಳನ್ನು ನಿರ್ಧರಿಸುವುದು;

(xvii) ಮಂಜೂರಾತಿಗಳು ಮತ್ತು ಸಂದಾಯಗಳ ವಿಷಯಗಳಲ್ಲಿ ಆಯುಕ್ತನ ಹಣಕಾಸು ಅಧಿಕಾರಗಳನ್ನು ಗೊತ್ತುಪಡಿಸುವುದು;

(xviii) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಯಾವುದೇ ಇತರ ಸಂಘಟನೆಗಳಿಂದ ಹಣಕಾಸು ನೆರವನ್ನು ಕೋರುವ ಪ್ರಾಜೆಕ್ಟ್ ವರದಿಗಳನ್ನು ಅನುಮೋದಿಸುವುದು;

(xix) ಕಾಲಕಾಲಕ್ಕೆ ಕೈಗೊಳ್ಳಬೇಕಾದ ಅಥವಾ ಆಯೋಜಿಸಬೇಕಾದ ವಿವಿಧ ಕಾರ್ಯಕ್ರಮಗಳನ್ನು ಅನುಮೋದಿಸುವುದು ಮತ್ತು ಅದನ್ನು ಆಯೋಜಿಸುವುದಕ್ಕಾಗಿ ಅಂಥ ಕಾರ್ಯಕ್ರಮಗಳಿಗಾಗಿ ಹಣಕಾಸು ಅನುದಾನಗಳನ್ನು ಮಂಜೂರು ಮಾಡುವುದು;

(xx) ಆಯುಕ್ತ, ನಿರ್ದೇಶಕರು, ವಿಭಾಗಗಳ ಇಲಾಖಾ ಮುಖ್ಯಸ್ಥರು ಒಳಗೊಂಡಂತೆ ಪ್ರಾಧಿಕಾರದ ಸಿಬ್ಬಂದಿಯ ಬಡ್ತಿಗಳು ಮತ್ತು ಇತರ ಸೇವಾ ವಿಷಯಗಳು ಮತ್ತು ಪ್ರಾಧಿಕಾರದ ಸಿಬ್ಬಂದಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲೆ 17ನೇ ಪ್ರಕರಣದ (3)ನೇ ಉಪ ಪ್ರಕರಣದ ಅಡಿಯಲ್ಲಿ ನಿರ್ಧಾರಗಳಿಗಾಗಿ ಅಪೀಲು ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುವುದು;

(xxi) ಆಯುಕ್ತರಿಗೆ ರಜೆಯನ್ನು ಮಂಜೂರು ಮಾಡುವುದು ಮತ್ತು ಕಚೇರಿಯಿಂದ ಆತನ ಗೈರುಹಾಜರಿಯ ಅವಧಿಯಲ್ಲಿ ಆಯುಕ್ತನ ಹುದ್ದೆಗೆ ಪ್ರಭಾರ ಏರ್ಪಾಡುಗಳನ್ನು ಮಾಡುವುದು;

(xxii) ಪ್ರಾಜೆಕ್ಟ್‌ಗಾಗಿ ಸಮಾಲೋಚಕರನ್ನು ನೇಮಕ ಮಾಡುವುದು ಹಾಗೂ ಅಗತ್ಯ ಮತ್ತು ಅವಶ್ಯಕತೆಗಳ ಆಧಾರದ ಮೇಲೆ ಅವರ ಗೌರವಧನಗಳನ್ನು ನಿಗಧಿಪಡಿಸುವುದು;

(xxiii) ಪಿಲಿಕುಳ ಪ್ರಾಜೆಕ್ಟ್ ಕಟ್ಟಡದ ಭದ್ರತೆ, ಆರೋಗ್ಯ ಮತ್ತು ಸ್ವಚ್ಛತೆ, ನೀರು ಸರಬರಾಜು, ಪ್ರಾಣಿಸಂಗ್ರಹಾಲಯದ ವನ್ಯಜೀವಿಗಳ ಕ್ಷೇಮ, ಸಿಬ್ಬಂದಿ ಕಲ್ಯಾಣದ ವಿಷಯಗಳು, ಸಂಪನ್ಮೂಲಗಳ ವೃದ್ಧಿ, ಪ್ರಚಾರ ಮತ್ತು ಗುರುತಿಸುವ ವಿಷಯಗಳನ್ನು ಗಮನಿಸುವುದು;

(xxiv) ಪ್ರಾಧಿಕಾರದ ಸೌಲಭ್ಯಗಳ ಉತ್ತಮ ಉಪಯೋಗಕ್ಕಾಗಿ ಭೋಗ್ಯ ಅಥವಾ ಕರಾರು ಮೇಲೆ ಕೊಡುವ ಕುರಿತು ನಿರ್ಧರಿಸಲು ಸ್ವತ: ನಿರ್ಮಾಣ (Build-Own) ಮತ್ತು ವರ್ಗಾವಣೆ ಸ್ಕೀಮಿನ ಮೇಲೆ ಸಾರ್ವಜನಿಕ ಖಾಸಗಿ ಪಾಲುದಾರರಿಗೆ ಕೊಡಬೇಕಾದ ಪ್ರಾಜೆಕ್ಟ್‌ಗಳನ್ನು ನಿರ್ಧರಿಸುವುದು;

ಪರಂತು, ಸಾರ್ವಜನಿಕ ಖಾಸಗಿ ಪಾಲುದಾರರ ಅಡಿಯಲ್ಲಿ ಯಾವುದೇ ಖಾಸಗಿ ಪಾಲುದಾರರ ಪಾತ್ರಗಳನ್ನು ಸ್ಪಷ್ಟವಾಗಿ ಪರಿಭಾಷಿಸತಕ್ಕದ್ದು. ಅವರ ಲಾಭವು ಪ್ರಾಜೆಕ್ಟ್‌ನಲ್ಲಿನ ಸರ್ಕಾರದ ಲಾಭವನ್ನು ಮೀರತಕ್ಕದ್ದಲ್ಲ. ಖಾಸಗಿ ಪಾಲುಕಾರರು ಸಮಾನ ಹಣಕಾಸು ವಂತಿಗೆಯನ್ನು ಮಾಡತಕ್ಕದ್ದು;

(xxv) ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಈ ಅಧಿನಿಯಮದ ಯಾವುದೇ ಉದ್ದೇಶಗಳನ್ನು ನೆರವೇರಿಸಲು ಅವಶ್ಯಕ ಅಥವಾ ಯುಕ್ತವೆಂದು ಪರಿಗಣಿಸಬಹುದಾದ ಎಲ್ಲಾ ಅಂಥ ಕಾರಾರುಗಳನ್ನು ಮಾಡಿಕೊಳ್ಳುವುದು ಮತ್ತು ನೆರವೇರಿಸುವುದು ಮತ್ತು ಪ್ರತಿಯೊಂದು ಕರಾರನ್ನು ಆಯುಕ್ತರು ಪ್ರಾಧಿಕಾರದ ಪರವಾಗಿ ಮಾಡತಕ್ಕದ್ದು;

(xxvi) ಪಿಲಿಕುಳ ಪ್ರದೇಶದ ನಿರ್ವಹಣೆಗಾಗಿ ಅವಕಾಶವನ್ನು ಕಲ್ಪಿಸುವುದು, ಇದು, ಸ್ವತ್ತುಗಳನ್ನು ನಿರ್ವಹಿಸಬೇಕಾದ ವಿಧಾನ, ಪಿಲಿಕುಳದಲ್ಲಿ ಬಳಸತಕ್ಕ ವಿವಿಧ ಸೌಲಭ್ಯಗಳಿಗಾಗಿ ಪಿಲಿಕುಳ ಪ್ರದೇಶದ ಸಂದರ್ಶಕರಿಂದ ಸಂಗ್ರಹಿಸಬೇಕಾದ ದರಗಳು, ಶುಲ್ಕಗಳು ಅಥವಾ ಇತರ ಚಾರ್ಜುಗಳ ಮತ್ತು ಪ್ರಾಧಿಕಾರದ ಆಸ್ತಿಗಳ ಸ್ವಾಧೀನದಲ್ಲಿ ಲೈಸೆನ್ಸುದಾರರು ಅಥವಾ ವ್ಯಕ್ತಿಗಳಿಂದ ಪ್ರಾಧಿಕಾರವು ನಿರ್ಧರಿಸಬಹುದಾದಂತೆ, ಲೈಸೆನ್ಸ್ ಶುಲ್ಕವನ್ನು ವಿಧಿಸುವ ಅಧಿಕಾರದಂಥವುಗಳನ್ನು ಒಳಗೊಳ್ಳತಕ್ಕದ್ದು.

**11. ಚೇರ್‌ಮನ್‌ರವರ ವಿಶೇಷ ಅಧಿಕಾರಗಳು.–** ತುರ್ತು ಸಂದರ್ಭದಲ್ಲಿ, ಪ್ರಾಧಿಕಾರದ ಸಭೆಯನ್ನು ಕರೆಯಲು ಸಾಕಷ್ಟು ಸಮಯವಿಲ್ಲದಿದ್ದಲ್ಲಿ, ಧ್ಯೇಯೋದ್ದೇಶದ ಪರಿಣಾಮಕಾರಿ ನೆರವೇರಿಕೆಗಾಗಿ, ಚೇರ್‌ಮನ್‌ರವರು ತಾನಾಗಿಯೇ ನೇರ ಕ್ರಮಗಳನ್ನು ಕೈಗೊಳ್ಳುವ ವಿಶೇಷ ಅಧಿಕಾರವನ್ನು ಹೊಂದಿರತಕ್ಕದ್ದು, ಚೇರ್‌ಮನ್‌ರವರು ಕ್ರಮಕೈಗೊಂಡು ಪ್ರಾಧಿಕಾರದ ಮುಂದೆ ಅದರ ತಕ್ಷಣದ ಮುಂದಿನ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸ್ಥಿರೀಕರಣವನ್ನು ಕೋರಬಹುದು. ಸಭೆಯ ಗಣಪೂರ್ತಿಯು ಶೇಕಡಾ ಐವತ್ತು ಅಥವಾ ಅದಕ್ಕಿಂತ ಹೆಚ್ಚು ಇರತಕ್ಕದ್ದು.

**12. ಪ್ರಾಧಿಕಾರದ ಸಭೆಗಳು.–** (1) ಪ್ರಾಧಿಕಾರವು, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಚೇರ್‌ಮನ್‌ರವರನ್ನು ಒಳಗೊಂಡತೆ ಅಂಥ ಸದಸ್ಯರನ್ನು ಒಳಗೊಂಡ ಸಮಿತಿಗಳನ್ನು ರಚಿಸತಕ್ಕದ್ದು, ಆದರೆ ಚೇರ್‌ಮನ್‌ರವರನ್ನು ಒಳಗೊಂಡಂತೆ ಒಂಬತ್ತು ಸದಸ್ಯರಿಗಿಂತ ಹೆಚ್ಚಾಗಿರತಕ್ಕದ್ದಲ್ಲ.

(2) ಪ್ರಾಧಿಕಾರವು ಸಮಿತಿಯ ಚೇರ್‌ಮನ್‌ರವರನ್ನು ನಾಮನಿರ್ದೇಶನ ಮಾಡತಕ್ಕದ್ದು ಮತ್ತು ಅಗತ್ಯವಿದ್ದಲ್ಲಿ ಹೊರಗಿನ ತಜ್ಞರನ್ನು ಅವರ ಅನುಭವದ ಬಲದ ಮೇಲೆ ಚೇರ್‌ಮನ್‌ರನ್ನಾಗಿ ಮತ್ತು ಸದಸ್ಯರನ್ನಾಗಿ ನೇಮಕ ಮಾಡಬಹುದು.

(3) ಪ್ರಾಧಿಕಾರದ ಆಯುಕ್ತನು ಕಡ್ಡಾಯವಾಗಿ ಸಮಿತಿಗಳ ಕಾರ್ಯದರ್ಶಿಯಾಗಿರತಕ್ಕದ್ದು.

(4) ಸಮಿತಿಗಳು, ಪ್ರಾಧಿಕಾರವು ಪ್ರತ್ಯಾಯೋಜಿಸಬಹುದಾದ, ಪ್ರಾಧಿಕಾರದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(5) ಸಮಿತಿಯು ಚೇರ್‌ಮನ್ ನಿರ್ಧರಿಸುವಷ್ಟು ಬಾರಿ ಸಭೆಯನ್ನು ಸೇರತಕ್ಕದ್ದು ಮತ್ತು ನಿಯಮಿಸಲಾದ ಸಮಯದ ಮಿತಿಯೊಳಗೆ ಪ್ರಾಧಿಕಾರವು ಕೊಟ್ಟಿರುವ ಕೆಲಸವನ್ನು ಪೂರ್ಣಗೊಳಿಸತಕ್ಕದ್ದು.

## ಅಧ್ಯಾಯ – III

## ಪ್ರಾಧಿಕಾರದ ಉದ್ಯೋಗಿಗಳು ಮತ್ತು ಅವರ ಕರ್ತವ್ಯಗಳು

**13. ಆಯುಕ್ತನ ನೇಮಕಾತಿ.–** (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಆದಷ್ಟು ಬೇಗನೆ, ಸರ್ಕಾರವು, ಕರ್ನಾಟಕ ಆಡಳಿತ ಸೇವೆಯ ಹಿರಿಯ ಶ್ರೇಣಿಗೆ ಸೇರಿದ ಒಬ್ಬ ಅಧಿಕಾರಿಯನ್ನು ಅಥವಾ ಸರ್ಕಾರದ ಉಪಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ರಾಜ್ಯ ಸಿವಿಲ್ ಸೇವಾ ಅಧಿಕಾರಿಯನ್ನು ಪ್ರಾಧಿಕಾರದ ಆಯುಕ್ತನಾಗಿ ನೇಮಿಸತಕ್ಕದ್ದು.

(2) ಆಯುಕ್ತನು, ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ವೇತನ ಮತ್ತು ಇತರ ಭತ್ಯಗಳನ್ನು ಸ್ವೀಕರಿಸತಕ್ಕದ್ದು.

**14. ಆಯುಕ್ತನ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಆಯುಕ್ತನು, ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಮತ್ತು ಆಡಳಿತಾಧಿಕಾರಿಯಾಗಿರತಕ್ಕದ್ದು ಮತ್ತು ಪ್ರಾಧಿಕಾರದ ಮೇಲ್ವಿಚಾರಣೆ, ನಿಯಂತ್ರಣ ಮತ್ತು ನಿರ್ದೇಶನಕ್ಕೆ ಒಳಪಟ್ಟು ಪ್ರಾಧಿಕಾರದ ಎಲ್ಲಾ ವ್ಯವಹಾರಗಳ ನಿರ್ವಹಣೆಗೆ ಜವಾಬ್ದಾರನಾಗಿರತಕ್ಕದ್ದು.

(2) ಆಯುಕ್ತನು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ತನಗೆ ಪ್ರದತ್ತವಾಗಿರುವಂತಹ ಪ್ರಕಾರ್ಯಗಳನ್ನು ನೆರವೇರಿಸುವುದರ ಜೊತೆಗೆ,-

(i) ಸರ್ಕಾರದ ಮಾರ್ಗಸೂಚಿಗಳೊಳಗಿನ ಪ್ರಾಧಿಕಾರದ ಗೊತ್ತುವಳಿಗಳನ್ನು ಕಾರ್ಯಗತಗೊಳಿಸತಕ್ಕದ್ದು;

(ii) ಪ್ರಾಧಿಕಾರದ ವ್ಯವಹಾರವನ್ನು ನಡೆಸುವುದು ಮತ್ತು ಪತ್ರ ವ್ಯವಹಾರವನ್ನು ನಡೆಸುವುದು;

(iii) ಪ್ರಾಧಿಕಾರವು ನಿರ್ದೇಶಿಸಬಹುದಾದಂಥ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಮತ್ತು ಕಾಮಗಾರಿಗಳನ್ನು ನಿರ್ವಹಿಸುವುದು ಮತ್ತು ಅದರ ಅವಶ್ಯಕ ವೆಚ್ಚವನ್ನು ಭರಿಸುವುದು;

(iv) ಪ್ರಾಧಿಕಾರದ ಬ್ಯಾಂಕ್ ಖಾತೆಗಳಲ್ಲಿ ವ್ಯವಹಾರ ನಡೆಸತಕ್ಕದ್ದು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳನ್ನು ನಿರ್ವಹಿಸಲು ಜವಾಬ್ದಾರರಾಗಿರತಕ್ಕದ್ದು;

(v) ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರ ಮೇಲೆ ಕಾರ್ಯನಿರ್ವಹಣೆ, ಆಡಳಿತ ವಿಷಯಗಳು ಮತ್ತು ಅಂತಹ ಅಧಿಕಾರಿಗಳು ಮತ್ತು ನೌಕರರ ಸೇವಾ ವಿಷಯಗಳು ಹಾಗೂ ಅವರ ವೇತನ ಮತ್ತು ಭತ್ಯೆಗಳನ್ನು ವಿನಿಯಮನಗೊಳಿಸುವ ಬಗ್ಗೆ ಮೇಲ್ವಿಚಾರಣೆ ಹಾಗೂ ನಿಯಂತ್ರಣವನ್ನು ಹೊಂದಿರತಕ್ಕದ್ದು;

(vi) ಪ್ರಾಧಿಕಾರದ ಸಂಕ್ಷಿಪ್ತ ಟಿಪ್ಪಣಿಗಳ ಮತ್ತು ಯಾವುದೇ ವಿವರ ಪತ್ರದ ಪ್ರತಿಯನ್ನು ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಕೋರಬಹುದಾದ ಇತರ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು;

(vii) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಆತನಿಗೆ ಪ್ರದತ್ತವಾದ ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು;

(viii) ಆತನು ಪ್ರಾಧಿಕಾರದ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧಿತ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ಅನುಮೋದನೆಗಾಗಿ ಪ್ರಾಧಿಕಾರದ ಮುಂದೆ ಮಂಡಿಸತಕ್ಕದ್ದು;

(ix) ಆತನು, ಯಾವುದೇ ಕಾನೂನು ನ್ಯಾಯಾಲಯ, ಕಾನೂನು ಪ್ರಾಧಿಕಾರ ಅಥವಾ ಯಾವುದೇ ಶಾಸನಬದ್ಧ ನಿಕಾಯದ ಮುಂದೆ ಪ್ರಾಧಿಕಾರದ ಪರ ಪ್ರತಿನಿಧಿಯಾಗಿರತಕ್ಕದ್ದು ಮತ್ತು ಪ್ರಾಧಿಕಾರವನ್ನು ಪ್ರತಿನಿಧಿಸಲು ಅಥವಾ ಸಮರ್ಥಿಸಲು ಪ್ರಾಧಿಕಾರದ ಪರವಾಗಿ ಯಾವುದೇ ಕಾನೂನು ಸಮಾಲೋಚನೆ, ಸಮಾಲೋಚಕರು ಅಥವಾ ತಜ್ಞರನ್ನು ನೇಮಿಸತಕ್ಕದ್ದು;

(x) ಆತನು ಪ್ರಾಧಿಕಾರದ ಎಲ್ಲಾ ದಾಖಲೆಗಳ ಅಭಿರಕ್ಷಕನಾಗಿರತಕ್ಕದ್ದು;

(xi) ಆತನು ಪ್ರಾಧಿಕಾರದ ಎಲ್ಲಾ ಸ್ವತ್ತುಗಳು ಮತ್ತು ಆಸ್ತಿಗಳನ್ನು ರಕ್ಷಿಸತಕ್ಕದ್ದು ಮತ್ತು ಪ್ರಾಧಿಕಾರದೊಡನೆ ಸಮಾಲೋಚಿಸಿ, ಅವುಗಳನ್ನು ರಕ್ಷಿಸಲು ಎಲ್ಲಾ ಅಂಥ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(xii) ಯಾವುದೇ ಪ್ರಾಧಿಕಾರ ಅಥವಾ ಕಾನೂನು ನ್ಯಾಯಾಲಯದ ಮುಂದೆ ಅಥವಾ ಪ್ರಾಧಿಕಾರದ ಪರವಾದ ಯಾವುದೇ ಕರಾರುಗಳು ಅಥವಾ ಒಪ್ಪಂದಗಳಿಗೆ ಪ್ರಾಧಿಕಾರದ ಪರವಾಗಿ ಆತನು ಕಾನೂನು ಸಹಿದಾರನಾಗಿರತಕ್ಕದ್ದು; ಮತ್ತು

(xiii) ಪ್ರಾಧಿಕಾರವು ಕಾಲಕಾಲಕ್ಕೆ ನಿರ್ಧರಿಸುವ ಮತ್ತು ಪ್ರತ್ಯಾಯೋಜಿಸುವ ಅಂಥ ಆಡಳಿತಾತ್ಮಕ ಹಾಗೂ ಹಣಕಾಸು ಅಧಿಕಾರಗಳನ್ನು ಆತನು ಚಲಾಯಿಸತಕ್ಕದ್ದು.

**15. ಲೆಕ್ಕಪತ್ರಗಳ ಅಧಿಕಾರಿಯ ನೇಮಕಾತಿ.-** (1) ಸರ್ಕಾರವು, ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯ, ಗ್ರೂಪ್ ಎ (ಕಿರಿಯ ಶ್ರೇಣಿ) ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ಪ್ರಾಧಿಕಾರದ ಲೆಕ್ಕಪತ್ರಗಳ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದು.

(2) ಲೆಕ್ಕಪತ್ರಗಳ ಅಧಿಕಾರಿಯು ಆಯುಕ್ತರಿಗೆ ವರದಿ ಮಾಡಿಕೊಳ್ಳತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**16. ಅಧಿಕಾರಿಗಳು ಮತ್ತು ಸಿಬ್ಬಂದಿಯ ನೇಮಕಾತಿ ವಿಧಾನಗಳು ಮತ್ತು ಸೇವಾ ಷರತ್ತುಗಳು.-** (1) ಸರ್ಕಾರವು, ಪ್ರಾಧಿಕಾರಕ್ಕೆ ಅವಶ್ಯಕವಾಗಬಹುದಾದ ಅಂಥ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿಯವರನ್ನು ಒದಗಿಸತಕ್ಕದ್ದು. ಪ್ರಾಧಿಕಾರದ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿಯ ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

(2) ಪ್ರಾಧಿಕಾರದ ಅಧಿಕಾರಿಗಳ ಮತ್ತು ಸಿಬ್ಬಂದಿಯ ಆಡಳಿತಾತ್ಮಕ ವೆಚ್ಚಗಳು, ಸಂಬಳ ಮತ್ತು ಭತ್ಯೆಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

**17. ಪ್ರಾಧಿಕಾರದ ನೌಕರರು.-** (1) ನಿಯಮಿಸಬಹುದಾದ ಅಂಥ ನಿಯಮಗಳಿಗೊಳಪಟ್ಟು ಪ್ರಾಧಿಕಾರವು, ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅದು ಅವಶ್ಯವೆಂದು ಭಾವಿಸುವಂತಹ ಸಂಖ್ಯೆಯ ನೌಕರರನ್ನು ನೇಮಕ ಮಾಡಿಕೊಳ್ಳಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿರುವ ಡಾ. ಶಿವರಾಮ ಕಾರಂತ ಪಿಲಿಕುಲ ನಿಸರ್ಗಧಾಮ ಮತ್ತು ಪಿಲಿಕುಲ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿಯ ಸಿಬ್ಬಂದಿಯ ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ನಿಯಮಗಳನ್ನು ನಿಯಮಿಸುವವರೆಗೆ ಈಗ ಇರುವ ಸೇವಾ ಷರತ್ತುಗಳು ಮತ್ತು ನಿಬಂಧನೆಗಳು ಮುಂದುವರೆಯತಕ್ಕದ್ದು.

(2) ಈಗ ಅಸ್ತಿತ್ವದಲ್ಲಿರುವ ಡಾ. ಶಿವರಾಮ ಕಾರಂತ ಪಿಲಿಕುಲ ನಿಸರ್ಗಧಾಮ ಮತ್ತು ಪಿಲಿಕುಲ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿಯ ಸಿಬ್ಬಂದಿಯು ಆದ್ಯತೆಯ ಮೇರೆಗೆ ಪಿಲಿಕುಲ ಅಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿಯಾಗತಕ್ಕದ್ದು. (1)ನೇ ಉಪಪ್ರಕರಣದಲ್ಲಿ

ಉಲ್ಲೇಖಿಸಲಾದ ಸಿಬ್ಬಂದಿಯ ಸಂಬಳಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಸಿಬ್ಬಂದಿ ವೃಂದಬಲವನ್ನು ಸೃಷ್ಟಿಸುವುದನ್ನು ಒಳಗೊಂಡಂತೆ ಸಿಬ್ಬಂದಿಯ ವಿಲೀನ ಹಾಗೂ ವೇತನ ಶ್ರೇಣಿಯನ್ನು ನಿಗದಿಗೊಳಿಸುವುದು ಸರ್ಕಾರದ ಅನುಮೋದನೆಗೆ ಅನುಗುಣವಾಗಿ ಇರತಕ್ಕದ್ದು.

(4) ಪ್ರಾಧಿಕಾರದ ಸಿಬ್ಬಂದಿಯ ಶಿಸ್ತು ವಿಷಯಗಳ ಸಂಬಂಧದಲ್ಲಿ ಪ್ರಾಧಿಕಾರವು ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು ಮತ್ತು ಪ್ರಾಧಿಕಾರದ ಸಿಬ್ಬಂದಿಯ ಮೇಲೆ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಚಲಾಯಿಸತಕ್ಕದ್ದು.

**18. ಇಲಾಖೆಯ ಅಧಿಕಾರಿಗಳು.–** (1) ಸಂಬಂಧಪಟ್ಟ ಇಲಾಖೆಗಳಿಗೆ ಸಂಬಂಧಿಸಿದ ಕೆಲಸಗಳನ್ನು ನೋಡಿಕೊಳ್ಳು ಸಂಬಂಧಪಟ್ಟ ಇಲಾಖೆಗಳ ಸರಣಿಯಲ್ಲಿ ಸಿಬ್ಬಂದಿಯನ್ನು ನಿಯೋಜನೆ ಮೇಲೆ ಪಿಲಿಕುಳವು, ತೆಗೆದುಕೊಳ್ಳತಕ್ಕದ್ದು. ಈ ಹುದ್ದೆಗಳಿಗೆ ಸರ್ಕಾರವು ಮಂಜೂರಾತಿ ನೀಡತಕ್ಕದ್ದು.

(2) ಘಟಕದ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಹೊಣೆಗಾರನಾದ ಸಂಬಂಧಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಯು ಪ್ರತಿಯೊಂದು ಘಟಕಕ್ಕೆ ಮುಖ್ಯಸ್ಥನಾಗಿರತಕ್ಕದ್ದು.

(3) ಪ್ರಾಧಿಕಾರವು ಕಾಲಕಾಲಕ್ಕೆ ಘಟಕದ ಪ್ರತಿಯೊಬ್ಬ ಮುಖ್ಯಸ್ಥನ ಅಧಿಕಾರ ಮತ್ತು ಹೊಣೆಗಾರಿಕೆಯನ್ನು ನಿರ್ಧರಿಸತಕ್ಕದ್ದು.

19. **ಪ್ರಾಧಿಕಾರದ ಅಡಿಯಲ್ಲಿ ಸೇವೆಗಳಿಗಾಗಿ ಸಾಮಾನ್ಯ ಅನರ್ಹತೆಗಳು.–** (1) ಯಾವೊಬ್ಬ ವ್ಯಕ್ತಿಯೂ, ನೇರವಾಗಿ ಅಥವಾ ಪರೋಕ್ಷವಾಗಿ ಪ್ರಾಧಿಕಾರದ ಅಧಿಕಾರಿ ಅಥವಾ ನೌಕರನಾಗಿ ಅಲ್ಲದೆ, ಖುದ್ದಾಗಿ ಅಥವಾ ತನ್ನ ಪಾಲುದಾರನ ಮೂಲಕ ಅಥವಾ ತನ್ನ ಏಜೆಂಟನ ಮೂಲಕ ಪ್ರಾಧಿಕಾರದ ಯಾವುದೇ ಷೇರನ್ನು ಅಥವಾ ಪ್ರಾಧಿಕಾರವು ಮಾಡಿಕೊಂಡ ಇಲ್ಲವೇ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಪ್ರಾಧಿಕಾರದ ಅಡಿಯಲ್ಲಿನ ಯಾವುದೇ ನಿಯೋಜನೆಯಲ್ಲಿ ಹಿತಾಸಕ್ತಿಯನ್ನು ಹೊಂದಿದ್ದರೆ ಆತನು ಪ್ರಾಧಿಕಾರದ ಅಧಿಕಾರಿ ಅಥವಾ ನೌಕರನಾಗತಕ್ಕದ್ದಲ್ಲ ಅಥವಾ ಹಾಗೆ ಉಳಿಯತಕ್ಕದ್ದಲ್ಲ.

(2) ಪ್ರಾಧಿಕಾರವು, ಜಾಬ್ ಚಾರ್ಟ್ ಅನ್ನು ಸೃಷ್ಟಿಸುವುದರ ಮೂಲಕ ಪ್ರತಿಯೊಬ್ಬ ಅಧಿಕಾರಿಯ ಪಾತ್ರಗಳು ಮತ್ತು ಹೊಣೆಗಾರಿಕೆಗಳನ್ನು ಪರಿಭಾಷಿಸತಕ್ಕದ್ದು. ಅದನ್ನು ಮತ್ತು ಕಾಲಕಾಲಕ್ಕೆ ಪ್ರಾಧಿಕಾರವು ವಹಿಸುವ ಇತರ ಅನಿರೀಕ್ಷಿತ ಕೆಲಸಗಳು ಮತ್ತು ಕರ್ತವ್ಯಗಳನ್ನು ಮಾಡತಕ್ಕದ್ದು. ಆಯುಕ್ತನು ಎಲ್ಲಾ ಸಿಬ್ಬಂದಿಯ ಕೆಲಸ ನಿರ್ವಹಿಸುವ ವಸ್ತುಸ್ಥಿತಿಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

## ಅಧ್ಯಾಯ – IV

## ಅಭಿವೃದ್ಧಿ ಮತ್ತು ನಿರ್ವಹಣೆ

**20. ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು, ಅದರ ಅನುಮೋದನೆ ಹಾಗೂ ಅದನ್ನು ಕಾರ್ಯಗತಗೊಳಿಸುವುದು.–** (1) ಪ್ರಾಧಿಕಾರವು ತನ್ನ ರಚನೆಯಾದ ತರುವಾಯ ಆದಷ್ಟು ಬೇಗನೆ, ಜೀವ ವೈವಿಧ್ಯತೆಯ, ಪರಂಪರೆ ಮತ್ತು ಸಂಸ್ಕೃತಿಯ ಸಂರಕ್ಷಣೆಗಾಗಿ ಸಾಮಾನ್ಯ ಜನರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಹಾಗೂ ಪ್ರವಾಸೋದ್ಯಮವನ್ನು ಉತ್ತೇಜಿಸುವುದಕ್ಕಾಗಿ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅರಿವನ್ನು ಉತ್ತೇಜಿಸುವುದಕ್ಕೆ ಮತ್ತು ಉಂಟುಮಾಡುವುದಕ್ಕೆ ಪಿಲಿಕುಳ ಪ್ರದೇಶದ ಅಭಿವೃದ್ಧಿಗಾಗಿ ಒಂದು ಯೋಜನೆಯನ್ನು ಸಿದ್ಧಪಡಿಸತಕ್ಕದ್ದು. ಅಭಿವೃದ್ಧಿ ಯೋಜನೆಯು ಈ ಮುಂದಿನಂತಿರತಕ್ಕದ್ದು, ಎಂದರೆ,

(i) ವನ್ಯ ಜೀವಿಗಳ ರಕ್ಷಣೆ ಮತ್ತು ಅವುಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಪರಿಸರ ಸಮತೋಲನವನ್ನು ನಿರ್ವಹಿಸುವುದಕ್ಕಾಗಿ ವನ್ಯ ಜೀವಿಗಳ ಸಂರಕ್ಷಣೆಯ ಪ್ರಾಮುಖ್ಯತೆಯ ಕುರಿತು ಜನರಲ್ಲಿ ಅರಿವು ಮತ್ತು ಜ್ಞಾನವನ್ನು ಪ್ರಸಾರ ಮಾಡುವುದು;

(ii) ಫ್ಲೋರಾ ಮತ್ತು ಫೌನಾದ ಮತ್ತು ಉದ್ಯಾನವನಗಳು ಇತ್ಯಾದಿಗಳನ್ನು ಅಭಿವೃದ್ಧಿಪಡಿಸುವ ಪ್ರಾಮುಖ್ಯತೆಯ ಬಗ್ಗೆ ಅರಿವನ್ನು ಪ್ರಸಾರ ಮಾಡುವುದು;

(iii) ಸಮುದ್ರ ಜೀವಿ, ಸಾಗರದ ಬಗ್ಗೆ ಅರಿವು ಪ್ರಸರಣ ಮಾಡುವುದು ಮತ್ತು ಸ್ಥಳೀಯ ಸ್ವಚ್ಛ ನೀರು ಮೀನು ಪ್ರಭೇದಗಳು ಮತ್ತು ಸಮುದ್ರ ಪ್ರಭೇಧಗಳು ಕುರಿತು ಅಧ್ಯಯನವನ್ನು ಕೈಗೊಳ್ಳಲು ಸಾಗರ ಅರಿವು ಕೇಂದ್ರವನ್ನು ಮತ್ತು ಸಮುದ್ರ ಸ್ವಚ್ಛ ನೀರು ಅಕ್ವೇರಿಯಂ ಅನ್ನು ಸ್ಥಾಪಿಸುವುದು;

(iv) ಕಡಿಮೆ ಶ್ರೇಣಿಯ ಅರಣ್ಯಗಳನ್ನು ಸುಧಾರಿಸುವುದು (reclaiming) ಮತ್ತು ಉನ್ನತೀಕರಿಸುವುದು ಹಾಗೆಯೇ ಮೈಕ್ರೋ ಫ್ಲೋರಾ ಮತ್ತು ಫೌನಾ ಒಳಗೊಂಡಂತೆ ಪ್ರದೇಶದಲ್ಲಿ ಕಂಡುಬರುವ ಜೀವವೈವಿಧ್ಯತೆಯನ್ನು ಸಂರಕ್ಷಣೆ ಮಾಡುವುದು ಮತ್ತು ವ್ಯವಸ್ಥಾಪನೆ ಮಾಡುವುದು;

(v) ಒಳನಾಡು ನೀರಿನ ದಡದ ಸುಧಾರಣೆಗಾಗಿ ಮಳೆನೀರನ್ನು ಮರುಭರ್ತಿ (Recharge) ಮಾಡುವುದು;

(vi) ಜೀವಿ ಮತ್ತು ಪರಿಸರದ ಸಮತೋಲನದ ನಿರ್ವಹಣೆಗಾಗಿ ಪಶ್ಚಿಮ ಘಟ್ಟಗಳ ಬಗ್ಗೆ ಅರಿವನ್ನು ಉಂಟುಮಾಡುವುದು ಮತ್ತು ಪಶ್ಚಿಮ ಘಟ್ಟಗಳ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸುವುದು;

(vii) ಸಾಂಪ್ರದಾಯಿಕ ಔಷಧೀಯ ಸಸ್ಯಗಳ ಬಗ್ಗೆ ಅರಿವನ್ನು ಉಂಟುಮಾಡುವುದು ಮತ್ತು ಔಷಧೀಯ ಸಸ್ಯಗಳ ಉದ್ಯಾನವನವನ್ನು ಸ್ಥಾಪಿಸುವುದು;

(viii) ವಿದ್ಯಾರ್ಥಿಗಳ ವ್ಯಾಸಂಗಗಳು ಮತ್ತು ಸಂಶೋಧನೆಗಾಗಿ ಸೌಲಭ್ಯವನ್ನು ಕಲ್ಪಿಸುವುದು;

(ix) ವೈಜ್ಞಾನಿಕ ಅರಿವನ್ನು ವೃದ್ಧಿಸುವುದು ಮತ್ತು ಪ್ರಚಾರ ಪಡಿಸುವುದು ಹಾಗೂ ಸಾಮಾನ್ಯ ಜನರು ಮತ್ತು ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಆಸಕ್ತಿಯನ್ನುಂಟುಮಾಡುವುದು ಮತ್ತು ಅವರಿಗೆ ಅವುಗಳ ಬಗ್ಗೆ ಅನುಭವ ಹೊಂದಲು ಸೌಲಭ್ಯ ಕಲ್ಪಿಸುವುದು;

(x) ಜೀವಂತ ಉದಾಹರಣೆಗಳ ಪ್ರಾಯೋಗಿಕ ಪ್ರದರ್ಶನಗಳು ಅಥವಾ ಗಮನಿಸುವಿಕೆಗಳನ್ನು ಕಲ್ಪಿಸುವುದು;

(xi) ಬಾಹ್ಯಾಕಾಶ ವಿಜ್ಞಾನ, ಜೈವಿಕ ತಂತ್ರಜ್ಞಾನ, ನ್ಯಾನೋ ತಂತ್ರಜ್ಞಾನ, ಮಾಹಿತಿ ವಿಜ್ಞಾನ ಕ್ಷೇತ್ರಗಳಲ್ಲಿ ಇತ್ತೀಚಿನ ಅಭಿವೃದ್ಧಿಗಳನ್ನು ಇಂದೀಕರಿಸುವುದು ಮತ್ತು ಯುವಪೀಳಿಗೆಗೆ ಜ್ಞಾನವನ್ನು ತಲುಪಿಸುವುದು;

(xii) ವಿಜ್ಞಾನಿಗಳು, ಇಂಜಿನಿಯರ್‌ಗಳು, ಟೆಕ್ನೋಕ್ರಾಟ್ಸ್ ಮತ್ತು ಸಮಾಜದ ಸೇವೆಯಲ್ಲಿರುವ ಇತರರ ಜೊತೆ ಸಂಪರ್ಕ ಅಭಿವೃದ್ಧಿಗಾಗಿ ರಾಷ್ಟ್ರೀಯ/ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಸಾಧಿಸುವುದು;

(xiii) ಗ್ರಾಮೀಣ ಮಕ್ಕಳಲ್ಲಿ ಉತ್ತಮ ಪ್ರೇರಣೆಯನ್ನುಂಟುಮಾಡಲು ಉದ್ದಿಮೆದಾರರು, ವಿಜ್ಞಾನಿಗಳು, ತಮ್ಮ ಕ್ಷೇತ್ರಗಳಲ್ಲಿ ಖ್ಯಾತರಾದ ಜನರೊಂದಿಗೆ ವಿಡಿಯೋ ಕಾನ್ಫೆರೆನ್ಸಿಂಗ್ ಮೂಲಕ ಆನ್‌ಲೈನ್ ಸಂಭಾಷಣೆಗಳು ಹಾಗೂ ಸಂವಾದವನ್ನು ಮಾಡುವುದು;

(xiv) ಸಾಮಾನ್ಯ ಮನುಷ್ಯನಿಗೆ ವಿಜ್ಞಾನದ ರಹಸ್ಯವನ್ನು ಬೇಧಿಸುವುದು (demystify) ಮತ್ತು ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ನಡೆಸುವುದು ಮತ್ತು ಮೂಢನಂಬಿಕೆಗಳನ್ನು ಹೊಡೆದೋಡಿಸುವುದು;

(xv) ಕ್ರಮಬದ್ಧ ಕಾರ್ಯಕ್ರಮಗಳ ಮೂಲಕ ಸವಾಲಿನ ಮತು ಸೃಜನಾತ್ಮಕವಾದ ಪರಿಸರವನ್ನು ಕಲ್ಪಿಸಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಪ್ರೇರೇಪಿಸುವುದು;

(xvi) ಜನರು ತಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಮತ್ತು ಅವರ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಲು, ಪರಿಸರ, ಜೀವವೈವಿಧ್ಯತೆ, ನೀರಿನ ಸಂರಕ್ಷಣೆ, ಸಾವಯವ ತೋಟಗಾರಿಕೆ ಮುಂತಾದ ಸಂಬಂಧಿಸಿದ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಪರಸ್ಪರ ಚರ್ಚೆಮಾಡುವ ಅಧಿವೇಶನಗಳಲ್ಲಿ ಭಾಗವಹಿಸಲು ಜನರನ್ನು ಪ್ರೋತ್ಸಾಹಿಸುವುದು;

(xvii) ಗ್ಯಾಲರಿಗಳು, ಕಾರ್ಯಾಗಾರಗಳನ್ನು ಸ್ಥಾಪಿಸುವ ಮತ್ತು ಅಂಥ ಉದ್ದೇಶಕ್ಕಾಗಿ ಬಳಕೆಯಾಗುವ ವಿಜ್ಞಾನ ಕಿಟ್‌ಗಳನ್ನು ಅಭಿವೃದ್ಧಿಪಡಿಸುವ ಮೂಲಕ ವಿಜ್ಞಾನದ ಬೋಧನೆ ಮತ್ತು ಕಲಿಕೆಗಾಗಿ ಸಂಪನ್ಮೂಲ ಕೇಂದ್ರವಾಗಿ ಸೇವೆ ನೀಡುವುದು;

(xviii) ಮಕ್ಕಳು ತಾವಾಗಿಯೇ ಕೆಲಸಗಳನ್ನು ಮಾಡುವಲ್ಲಿ ಅನ್ವೇಷಣೆ ಮತ್ತು ಶೋಧನೆ ಮತ್ತು ಸಂತೋಷದ ಮನೋಭಾವವನ್ನು ಹೊಂದುವಂತಹ ವಾತಾವರಣವನ್ನು ಒದಗಿಸುವುದು. ಈ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಹವ್ಯಾಸ ಕೇಂದ್ರವನ್ನು ಸ್ಥಾಪಿಸುವುದು ಹಾಗೂ ಮ್ಯೂಸಿಯಂ ಬಸ್ಸನ್ನು ಪ್ರಾರಂಭಿಸುವುದು;

(xix) ಇಡೀ ಸಮಾಜಕ್ಕೆ ವೈಜ್ಞಾನಿಕ ಸಾಹಿತ್ಯವನ್ನು ಪ್ರಸಾರ ಮಾಡುವುದರಲ್ಲಿ ಹಾಗೂ "ವೈಜ್ಞಾನಿಕ ಅರಿವು" ತರಲು "ಉತ್ಕೃಷ್ಟತಾ ಕೇಂದ್ರ" ಮತ್ತು "ಸಂಪನ್ಮೂಲ ಕೇಂದ್ರ"ವಾಗಿ ಸೇವೆ ನೀಡವುದು. ವಿಜ್ಞಾನವು ಜೀವನ ಮಾರ್ಗವಾಗತಕ್ಕದ್ದು ಮತ್ತು ತೀವ್ರ ಆಲೋಚನೆಯು ಹವ್ಯಾಸವಾಗತಕ್ಕದ್ದು;

(xx) ಪ್ರದೇಶದ ಇತಿಹಾಸ, ಕಲೆ ಮತ್ತು ಸಂಸ್ಕೃತಿಯಲ್ಲಿ ಆಸಕ್ತಿಯನ್ನು ಉಂಟುಮಾಡುವುದು;

(xxi) ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಮತ್ತು ಖಾದಿ ಮತ್ತು ಗ್ರಾಮ ಕೈಗಾರಿಕೆಗಳು, ಕೈಮಗ್ಗ ಚಟುವಟಿಕೆಗಳು ಇತ್ಯಾದಿಯನ್ನು ಉತ್ತೇಜಿಸುವುದು;

(xxii) ವಿಜ್ಞಾನ ಮತ್ತು ತಂತ್ರಜ್ಞಾನ, ಕಲೆ, ಸಂಸ್ಕೃತಿ, ಪರಂಪರೆ, ಸ್ಥಳೀಯ ಇತಿಹಾಸ, ಫ್ಲೋರಾ ಮತ್ತು ಫೌನಾ, ಪಶ್ಚಿಮ ಘಟ್ಟಗಳ ಪ್ರಾಮುಖ್ಯತೆ, ಕರಾವಳಿ ಪರಿಸರ, ಸ್ವಚ್ಛ ನೀರು ಮತ್ತು ಸಮುದ್ರ ಮೀನು ಪ್ರಭೇದಗಳು, ವೈದ್ಯಕೀಯ ಸಸ್ಯಗಳು, ವನ್ಯ ಜೀವಿ, ಪ್ರವಾಸೋದ್ಯಮ, ಪರಿಸರ, ಅಂತರ್ಜಲವನ್ನು ಮರುಭರ್ತಿ ಮಾಡುವುದು, ಮಳೆ ನೀರು ಕೊಯ್ಲು, ಪರಿಸರ ಸ್ನೇಹಿ ತೋಟಗಾರಿಕೆ ಕ್ಷೇತ್ರಗಳಲ್ಲಿ ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು ನೀಡುವುದು ಮತ್ತು ಅಂಥ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಅವಶ್ಯವಾದ ಸಂಸ್ಥೆಗಳನ್ನು ಸ್ಥಾಪಿಸುವುದು;

(xxiii) ಪ್ರವಾಸೋದ್ಯಮವನ್ನು ಮತ್ತು ಮನೋರಂಜನಾ ಸೌಲಭ್ಯಗಳನ್ನು ಉತ್ತೇಜಿಸುವುದು ಪಿಲಿಕುಳ ಸರೋವರದಲ್ಲಿ ದೋಣಿವಿಹಾರ, ರೋಪ್ ವೇ, ಟಾಯ್ ಟ್ರೈನ್, ಕೆಫೆಟೇರಿಯಾ, ಕಾಟೇಜುಗಳು, ಸಂಗೀತ ಕಾರಂಜಿ, ಮನೋರಂಜನಾ ಉದ್ಯಾನವನ, ಗಾಲ್ಫ್ ಕೋರ್ಸ್ ಇತ್ಯಾದಿಗಳನ್ನು ಸ್ಥಾಪಿಸುವುದು;

(xxiv) ಸಾರ್ವಜನಿಕ ಉದ್ಯಾನವನಗಳು, ತೋಟಗಾರಿಕೆ ಅಥವಾ ಮೃಗೋದ್ಯಾನಗಳು, ಕಾರಂಜಿ ಉದ್ಯಾನವನಗಳು, ಕೃತಕ ಜಲಪಾತಗಳು, ಆಟವಾಡುವ ಉದ್ಯಾನವನಗಳು, ದೋಣಿವಿಹಾರದೊಂದಿಗಿನ ಸರೋವರಗಳು ಅಥವಾ ಇತರ ನೀರಿನ ಆಟಗಳು ಅಥವಾ ಅಂಥ ಇತರ ಪ್ರವಾಸೋದ್ಯಮ ಆಕರ್ಷಣೆಗಳನ್ನು ಮಾಡುವುದು;

(xxv) ವಿವಿಧ ವರ್ಗಗಳ ಪ್ರವಾಸಿಗಳಿಗೆ ಆಹಾರವನ್ನು ಒದಗಿಸಲು ಛತ್ರಗಳು, ವಸತಿ ನಿಲಯಗಳು, ಕಾಟೇಜುಗಳು, ಹೋಟೆಲುಗಳು, ರೆಸ್ಟೋರೆಂಟುಗಳು ಮತ್ತು ಬೋರ್ಡಿಂಗ್ ನಿವಾಸಗಳನ್ನು ನಿರ್ಮಿಸುವುದು;

(xxvi) ಅವಶ್ಯಕವಾದ ಅಂಗಡಿಗಳ ಸರಣಿಯನ್ನು ಅಥವಾ ಅಂಗಡಿಗಳ ಸಂಕೀರ್ಣಗಳನ್ನು ನಿರ್ಮಿಸುವುದು;

(xxvii) 2ನೇ ಪ್ರಕರಣದ (ಬಿ)ಖಂಡದ ಅಡಿಯಲ್ಲಿ ಪರಿಭಾಷಿಸಲಾದ ಸೌಕರ್ಯಗಳನ್ನು ಒದಗಿಸುವುದು;

(xxviii) ಕಟ್ಟಡಗಳ ನಿರ್ಮಾಣ ಮತ್ತು ಮರುನಿರ್ಮಾಣಗಳನ್ನು ಒಳಗೊಂಡಂತೆ ಎಲ್ಲಾ ಅಥವಾ ಯಾವುದೇ ಭೂಮಿಯಲ್ಲಿ ರಸ್ತೆಯನ್ನು ನಿರ್ಮಿಸುವುದು ಮತ್ತು ಮರುನಿರ್ಮಿಸುವುದು;

(xxix) ಸಾಮಾನ್ಯವಾಗಿ ತನ್ನ ಕ್ರಿಯಾಯೋಜನೆಗೆ ಸೌಲಭ್ಯ ಒದಗಿಸಲು ಮತ್ತು ವಿಶೇಷವಾಗಿ ಉತ್ತಮ ಒಳಚರಂಡಿ ವ್ಯವಸ್ಥೆಗಾಗಿ ಪ್ರಾಧಿಕಾರವು ಯುಕ್ತವೆಂದು ಪರಿಗಣಿಸಬಹುದಾದ ಯಾವುದೇ ಭೂಮಿಯನ್ನು ಪಡೆಯುವುದು;

(xxx) ಸರ್ಕಾರದಿಂದ ಅನುಮತಿಯನ್ನು ಪಡೆದು, ಮಾನವ ವಸತಿಗೆ ಸೂಕ್ತವಲ್ಲದ ಮತ್ತು ಅಭಿವೃದ್ಧಿ ಯೋಜನೆಗೆ ಯೋಗ್ಯವಲ್ಲದ ಎಲ್ಲಾ ಕಟ್ಟಡಗಳನ್ನು ನೆಲಸಮಗೊಳಿಸುವುದು;

(xxxi) ತೊಂದರೆ ಉಂಟುಮಾಡುವ ಕಟ್ಟಡ ಅಥವಾ ಕಟ್ಟಡಗಳ ಭಾಗಗಳನ್ನು ನೆಲಸಮಗೊಳಿಸುವುದು;

(xxxii) ಸಂಪರ್ಕ ಮತ್ತು ಸಾರಿಗೆಗಾಗಿ (ನವೀನಾತ್ಮಕ ಮತ್ತು ಪರಿಸರ ಸ್ನೇಹಿ) ಪಾರ್ಕಿಂಗ್ ಸೌಲಭ್ಯಗಳೊಂದಿಗೆ ಸೌಕರ್ಯಗಳನ್ನೊದಗಿಸುವುದು;

(xxxiii) ಪ್ರಾಧಿಕಾರದ ಅನುಮೋದಿತ ಅಭಿವೃದ್ಧಿ ಯೋಜನೆಯನ್ನು ಆಯುಕ್ತರ ಮೂಲಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುವುದು;

(xxxiv) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999ರ (2000ರ ಕರ್ನಾಟಕ ಅಧಿನಿಯಮ 29) ಉಪಬಂಧಗಳಿಗೆ ಅನುಸಾರವಾಗಿ ಅನುಮೋದಿತ ಯೋಜನೆಯಲ್ಲಿ ಅಭಿವೃದ್ಧಿಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಕಾಮಗಾರಿಗಳನ್ನು ಕೈಗೊಳ್ಳುವುದು ಮತ್ತು ವೆಚ್ಚವನ್ನು ಭರಿಸುವುದು;

(xxxv) ಗ್ರಾಮೀಣ ಜನರಿಗೆ ಯುಕ್ತ ತಂತ್ರಜ್ಞಾನಗಳು ಮತ್ತು ಕೃಷಿ ಪದ್ಧತಿಗಳನ್ನು ಪ್ರಸಾರ ಮಾಡುವುದು ಮತ್ತು ತೋಟಗಾರಿಕೆ ವಲಯದಲ್ಲಿ ಆಧುನಿಕ ಅಭಿವೃದ್ಧಿಗಳ ಕುರಿತು ಅವರಿಗೆ ಸಲಹೆ ನೀಡುವುದು;

(xxxvi) ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಅವಶ್ಯಕವೆಂದು ಪ್ರಾಧಿಕಾರವು ಅಭಿಪ್ರಾಯಪಡುವ ಭೂಮಿಯನ್ನು ಸ್ವಾಧೀನ ಅಥವಾ ಖರೀದಿ, ವಿನಿಮಯ ಅಥವಾ ಅನ್ಯಥಾ ಮೂಲಕ ಸ್ವಾಧೀನಪಡಿಸಿಕೊಳ್ಳುವುದು;

(xxxvii) ಸರ್ಕಾರದ ಪೂರ್ವಾನುಮೋದನೆಗೆ ಒಳಪಟ್ಟು, ಸ್ಕೀಮಿನಲ್ಲಿ ಒಳಗೊಂಡ ಯಾವುದೇ ಸ್ವತ್ತನ್ನು ಮಾರಾಟ ಮಾಡುವುದು, ಬಾಡಿಗೆ ನೀಡುವುದು ಅಥವಾ ವಿನಿಮಯ ಮಾಡುವುದು; ಮತ್ತು

(xxxviii) ಪ್ರಾಧಿಕಾರವು ಸಿದ್ಧಪಡಿಸಿದ ವಾರ್ಷಿಕ ಯೋಜನೆಯು ಸರ್ಕಾರಿ ನಿಧಿ ಹಾಗೂ ತನ್ನದೇ ನಿಧಿಗಳನ್ನು ಒಳಗೊಳ್ಳತಕ್ಕದ್ದು.

(2) ಮೇಲೆ ನಮೂದಿಸಲಾದ ಉದ್ದೇಶಗಳನ್ನು ಪೂರೈಸಲು, ಕರ್ನಾಟಕ ರಾಜ್ಯದ ಅಂಥ ಇತರ ಸ್ಥಳಗಳಲ್ಲಿ ಪಿಲಿಕುಳ ಪ್ರದೇಶವನ್ನು ಸ್ಥಾಪಿಸುವುದು. ಪ್ರಾಧಿಕಾರದ ಅಭಿಪ್ರಾಯದಲ್ಲಿ ಜೀವವೈವಿಧ್ಯತೆಯ ರಕ್ಷಣೆ ಮತ್ತು ಪ್ರವರ್ಧನೆಗಾಗಿ ಪಿಲಿಕುಳವನ್ನು ಅಭಿವೃದ್ಧಿಪಡಿಸುವುದು ಮತ್ತು ನಿರ್ವಹಿಸುವ ದೃಷ್ಟಿಕೋನದೊಂದಿಗೆ ಅದಕ್ಕೆ ಯುಕ್ತವಾದ ಮತ್ತು ಪ್ರಾಸಂಗಿಕವಾದ ಯಾವುದೇ ಇತರ ವಿಷಯದ ಕುರಿತು ಉಪಬಂಧವನ್ನು ಕಲ್ಪಿಸುವುದು ಹಾಗೂ ಪರಿಸರ ಸಮತೋಲನವನ್ನು ಕಾಪಾಡುವುದಕ್ಕಾಗಿ ಜೀವವೈವಿಧ್ಯಗಳ ಸಂರಕ್ಷಣೆಯ ಪ್ರಾಮುಖ್ಯತೆಯ ಕುರಿತಂತೆ ಜನರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಜಾಗೃತಿ ಮತ್ತು ಜ್ಞಾನವನ್ನು ಪ್ರಸರಿಸುವುದು.

**21. ಮುಂದಿನ ಅಭಿವೃದ್ಧಿ ಕಾಮಗಾರಿಗಳು.–** 20ನೇ ಪ್ರಕರಣದ ಅಡಿಯಲ್ಲಿನ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಿದ ತರುವಾಯ, ಪ್ರಾಧಿಕಾರವು, ಕಾಲಕಾಲಕ್ಕೆ, ತನ್ನ ಸ್ವಂತ ಅಥವಾ ಪಡೆದುಕೊಂಡ ಹಣಕಾಸು ಸಂಪನ್ಮೂಲಗಳಿಂದ ಅಥವಾ ಜನಪ್ರೀತಿಯ (philanthropic support) ಅಥವಾ ಸಿಎಸ್‌ಆರ್ ಬೆಂಬಲದಿಂದ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರದ ನಿಧಿಗಳಿಂದ, ಸರ್ಕಾರದ ಸ್ಪಷ್ಟ ಅನುಮೋದನೆಯನ್ನು ಪಡೆದ ತರುವಾಯ, ಯಾವುದೇ ಹೊಸ ಹೆಚ್ಚುವರಿ ಅಭಿವೃದ್ಧಿ ಸ್ಕೀಮುಗಳನ್ನು ಮಾಡಬಹುದು ಮತ್ತು ಕೈಗೊಳ್ಳಬಹುದು.

**22. ಅಧಿಕಾರಗಳ ಪ್ರತ್ಯಾಯೋಜನೆ.–** ಪ್ರಾಧಿಕಾರವು, ಗೊತ್ತುವಳಿಯ ಮೂಲಕ, 39ನೇ ಪ್ರಕರಣದ ಅಡಿಯಲ್ಲಿನ ನಿಯಮಗಳ ರಚನಾಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು ಅಧ್ಯಕ್ಷರಿಗೆ ಮತ್ತು ಆಯುಕ್ತರಿಗೆ ಪ್ರತ್ಯಾಯೋಜಿಸಬಹುದು.

**23. 1974ರ ಕರ್ನಾಟಕ ಅಧಿನಿಯಮ, 32ನ್ನು ಅನ್ವಯಿಸುವುದು.–** (1) (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅಧಿಸೂಚನೆಯ ಮೂಲಕ, ಅಂತಹ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ನ್ನು (1974ರ ಕರ್ನಾಟಕ ಅಧಿನಿಯಮ 32) ಸಾರ್ವಜನಿಕ ಆವರಣಗಳಿಗೆ ಸಂಬಂಧಿಸಿ ಅನ್ವಯಿಸುವಂತೆ ಪ್ರಾಧಿಕಾರಕ್ಕೆ ಸೇರಿದ, ಅದರಲ್ಲಿ ನಿಹಿತವಾದ ಅಥವಾ ಅದು ಗುತ್ತಿಗೆಗೆ ತೆಗೆದುಕೊಂಡ ಆವರಣಕ್ಕೆ ಅನ್ವಯಿಸತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(2) ಮೇಲೆ ಹೇಳಿದ ಅಧಿನಿಯಮದ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳು ಈ ಮುಂದಿನ ಮಾರ್ಪಾಡುಗಳೊಡನೆ ಪ್ರಾಧಿಕಾರಕ್ಕೆ ಸೇರಿದ ಆವರಣಗಳಿಗೆ ಅನ್ವಯಿಸತಕ್ಕದ್ದು, ಎಂದರೆ:–

(i) ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂತೆ ಸರ್ಕಾರದ ಅಥವಾ ಪ್ರಾಧಿಕಾರದ ಒಬ್ಬ ಅಧಿಕಾರಿಯನ್ನು ಮೇಲ್ಕಂಡ ಅಧಿನಿಯಮದ ಉದ್ದೇಶಗಳಿಗಾಗಿ ಸಕ್ಷಮ ಅಧಿಕಾರಿಯೆಂದು ನೇಮಿಸಬಹುದು;

(ii) ಇಲ್ಲಿ ಮಾಡಲಾದ ಆ ಅಧಿನಿಯಮ ಮತ್ತು ನಿಯಮಗಳಲ್ಲಿ "ಸಾರ್ವಜನಿಕ ಆವರಣಗಳು" ಉಲ್ಲೇಖಗಳು ಪ್ರಾಧಿಕಾರದ ಆವರಣಗಳಿಗೆ ಉಲ್ಲೇಖಗಳೆಂದು ಭಾವಿಸತಕ್ಕದ್ದು ಮತ್ತು "ಸರ್ಕಾರ" ದ ಉಲ್ಲೇಖಗಳು ಪ್ರಾಧಿಕಾರದ ಉಲ್ಲೇಖಗಳೆಂದು ಭಾವಿಸತಕ್ಕದ್ದು.

(iii) ಪ್ರಾಧಿಕಾರವು ಸೃಷ್ಟಿಸಿದ ಎಲ್ಲಾ ಸ್ವತ್ತುಗಳು ಸರ್ಕಾರದ ಆಸ್ತಿಯಾಗಿರತಕ್ಕದ್ದು.

## ಅಧ್ಯಾಯ – V

## ಹಣಕಾಸು ಮತ್ತು ಸ್ವತ್ತು

**24. ಪ್ರಾಧಿಕಾರದ ನಿಧಿ.–** (1) ಪಿಲುಕುಲ ಪ್ರಾಧಿಕಾರ ನಿಧಿಯೆಂದು ಕರೆಯಲಾಗುವ ಒಂದು ನಿಧಿಯು ಇರತಕ್ಕದ್ದು.

(2) ಸದರಿ ನಿಧಿಗೆ,–

(i) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮಿತವಾದ ಇಲ್ಲವೇ ನಿಗಮಿತವಲ್ಲದ ಯಾವುದೇ ನಿಕಾಯ ಅಥವಾ ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ಅನುದಾನಗಳು, ಧನ ಸಹಾಯ, ದೇಣಿಗೆಗಳು ಮತ್ತು ದಾನಗಳನ್ನು;

(ii) ಪ್ರಾಧಿಕಾರವು ಸಾಲ ಪಡೆದ ಮೊಬಲಗನ್ನು ; ಮತ್ತು

(iii) ಯಾವುದೇ ಮೂಲದಿಂದಾಗಲಿ, ಪ್ರಾಧಿಕಾರವು ಅಥವಾ ಪ್ರಾಧಿಕಾರದ ಪರವಾಗಿ ಪಡೆದುಕೊಂಡ ಇತರ ಎಲ್ಲಾ ಮೊತ್ತಗಳನ್ನು,

– ಜಮೆ ಮಾಡತಕ್ಕದ್ದು;

(iv) ನಿಧಿಗೆ ಜಮೆಮಾಡಲಾದ ಎಲ್ಲ ಹಣವನ್ನು ಪ್ರಾಧಿಕಾರವು ನಿರ್ಧರಿಸಲಾದಂತೆ ಸ್ಪರ್ಧಾತ್ಮಕ ಬಡ್ಡಿ ದರಗಳಲ್ಲಿ ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಹೂಡತಕ್ಕದ್ದು, ಹಾಗೂ

(V) ಪ್ರಾಧಿಕಾರದ ಆಯುಕ್ತರಿಗೆ ಮತ್ತು ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿವೇತನವೇನಾದರೂ ಇದ್ದಲ್ಲಿ, ಅದನ್ನೂ ಒಳಗೊಂಡಂತೆ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳನ್ನು ಪ್ರಾಧಿಕಾರದ ನಿಧಿಯಿಂದ ಪಾವತಿಸತಕ್ಕದ್ದು.

**25. ನಿಧಿಯ ಬಳಕೆ.–** ಪ್ರಾಧಿಕಾರವು ಹೊಂದಿರುವ ಅಥವಾ ಅದರಲ್ಲಿ ನಿಹಿತವಾಗಿರುವ ನಿಧಿಯನ್ನು ಮತ್ತು ಎಲ್ಲ ಸ್ವತ್ತನ್ನು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಬಳಸಿಕೊಳ್ಳತಕ್ಕದ್ದು.

**26. ಸರ್ಕಾರದಿಂದ ಅನುದಾನ.–** (1) ಪ್ರಾಧಿಕಾರದ ತನ್ನದೇ ಸಂಪನ್ಮೂಲಗಳಿಂದ ಸ್ವಯಂ ನಿರ್ವಹಣೆ ಮಾಡಿಕೊಳ್ಳುವ ಹಂತವನ್ನು ತಲುಪುವವರೆಗೆ ಸರ್ಕಾರವು ಪ್ರತಿ ವರ್ಷವೂ ಪ್ರಾಧಿಕಾರಕ್ಕೆ ಆಡಳಿತಾತ್ಮಕ ವೆಚ್ಚಗಳಿಗೆ ಅನುದಾನವನ್ನು ನೀಡತಕ್ಕದ್ದು.

(2) ಪ್ರಾಧಿಕಾರವು ತನ್ನ ಕೆಲಸವನ್ನು ಪ್ರಾರಂಭಿಸಿದಂದಿನಿಂದ ಮೂರರಿಂದ ನಾಲ್ಕು ವರ್ಷಗಳೊಳಗೆ ಸ್ವಯಂ–ಸಮರ್ಥತೆಯನ್ನು ಪಡೆಯುವೆಡೆಗೆ ಕಾರ್ಯನಿರ್ವಹಿಸತಕ್ಕದ್ದು ಮತ್ತು ಐದನೇ ವರ್ಷದಿಂದ ಮುಂದೆ ತನ್ನ ಸ್ವಂತ ಸಂಪಾದನೆಗಳಿಂದ ನಿರ್ವಹಣೆ ಮಾಡುವ, ನಡೆಸುವ ಮತ್ತು ಅಭಿವೃದ್ಧಿ ಪಡಿಸುವ ಸಂಪೂರ್ಣ ಪ್ರಯತ್ನಗಳನ್ನು ಮಾಡತಕ್ಕದ್ದು.

(3) ಪ್ರಾಧಿಕಾರವು ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮಾತ್ರ ಇತರ ಮೂಲಗಳಿಂದ ನಿಧಿಯನ್ನು ಸಾಲಪಡೆಯತಕ್ಕದ್ದು.

**27. ಆಯವ್ಯಯ.–** (1) ಪ್ರಾಧಿಕಾರವು ಪ್ರತಿ ವರ್ಷವೂ, ನಿಯಮಿಸಬಹುದಾದಂತಹ ದಿನಾಂಕಕ್ಕೆ ಮೊದಲು ಮತ್ತು ಅಂತಹ ನಮೂನೆಯಲ್ಲಿ ಹಣಕಾಸು ವರ್ಷಕ್ಕಾಗಿ ತನ್ನ ಆದಾಯ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ಸಿದ್ಧಪಡಿಸತಕ್ಕದ್ದು ಮತ್ತು ಸರ್ಕಾರಕ್ಕೆ ಅವಶ್ಯಕ ಕ್ರಮಕ್ಕಾಗಿ ಕಳುಹಿಸತಕ್ಕದ್ದು.

(2) ಪ್ರಾಧಿಕಾರದ ಮೇಲ್ವಿಚಾರಣೆ, ನಿಯಂತ್ರಣವನ್ನು ಚಲಾಯಿಸಲು ಮತ್ತು ನಿರ್ದೇಶನಗಳನ್ನು ನೀಡಲು ಸರ್ಕಾರದ ಪರವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಇದು ಪ್ರಾಧಿಕಾರಕ್ಕೆ ನೋಡಲ್ ಇಲಾಖೆಯಾಗಿರತಕ್ಕದ್ದು.

(3) ಪ್ರಾಧಿಕಾರವು ಮಂಜೂರಾದ ಆಯವ್ಯಯದಿಂದ ಮತ್ತು ಅನುಮೋದಿತ ಯೋಜನೆಯನ್ವಯ ವೆಚ್ಚವನ್ನು ಭರಿಸತಕ್ಕದ್ದು. ಯಾವುದೇ ತುರ್ತು ಸಂದರ್ಭದಲ್ಲಿ, ಇತರ ವಿಚಾರ ಅಥವಾ ವಿಷಯ ಅಥವಾ ಯೋಜನೆಗಳಿಗೆ ಸಂಬಂಧಿಸಿದ ವೆಚ್ಚಗಳಿಗಾಗಿ, ಅದನ್ನು ನಿರ್ಧರಿಸಲು ಪ್ರಾಧಿಕಾರದ ವಿಶೇಷ ಸಭೆಯನ್ನು ಕರೆಯತಕ್ಕದ್ದು.

(4) ಸರ್ಕಾರವು ಗೊತ್ತುಪಡಿಸಲಾದಂತೆ ಅನುಮತಿಸಬಹುದಾದ ಮಿತಿಗಳಿಗೆ ಮೀರಿ ವೆಚ್ಚದ ಒಂದು ಘಟಕದಿಂದ ಮತ್ತೊಂದು ಘಟಕಕ್ಕೆ ನಿಧಿಯನ್ನು ಪುನರ್ ವಿನಿಯೋಗ ಮಾಡುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರತಕ್ಕದ್ದಲ್ಲ. ಆದಾಗ್ಯೂ, ಅನುಮತಿಸಬಹುದಾದ ಮಿತಿಗಳಿಗೆ ಮೀರಿದ ಯಾವುದೇ ಪುನರ್ ವಿನಿಯೋಗಕ್ಕೆ ಸರ್ಕಾರದ ಪೂರ್ವಾನುಮೋದನೆಯು ಅಗತ್ಯವಾಗಿರತಕ್ಕದ್ದು.

**28. ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಆಯುಕ್ತನು, ನಿಯಮಿಸಬಹುದಾದಂಥ ಲೆಕ್ಕಪತ್ರಗಳ ಪುಸ್ತಕಗಳನ್ನು ಮತ್ತು ಇತರ ರಿಜಿಸ್ಟರುಗಳನ್ನು ನಿರ್ವಹಿಸುವುದಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ನಿಯಮಿಸಲಾದ ವಿಧಾನದಲ್ಲಿ ವಾರ್ಷಿಕ ಲೆಕ್ಕಪತ್ರಗಳ ತ:ಖ್ತೆಯನ್ನು ಸಿದ್ದಪಡಿಸತಕ್ಕದ್ದು.

(2) ಪ್ರಾಧಿಕಾರದ ಹಣಕಾಸು ವರ್ಷವು ಪ್ರತಿ ಕ್ಯಾಲೆಂಡರ್ ವರ್ಷದ ಏಪ್ರಿಲ್ ಒಂದನೆಯ ದಿನಾಂಕದಂದು ಪ್ರಾರಂಭವಾಗತಕ್ಕದ್ದು ಮತ್ತು ಮುಂಬರುವ ಕ್ಯಾಲೆಂಡರ್ ವರ್ಷದ ಮಾರ್ಚಿ 31ನೇ ದಿನದಂದು ಕೊನೆಗೊಳ್ಳತಕ್ಕದ್ದು.

(3) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಮೂಲಕ ಮಾಡಲಾದ ಹೆಸರಿನ ಪಟ್ಟಿಯಲ್ಲಿನ ನೋಂದಾಯಿತ ಚಾರ್ಟರ್ಡ್ ಅಕೌಂಟೆಂಟನು ಲೆಕ್ಕಪರಿಶೋಧನೆ ಮಾಡತಕ್ಕದ್ದು. ಪ್ರಾಧಿಕಾರ ಅಥವಾ ಸರ್ಕಾರವು, ತಾನು ಅವಶ್ಯವೆಂದು ಭಾವಿಸಿದಲ್ಲಿ, ಸಮವರ್ತಿ ಮತ್ತು ವಿಶೇಷ ಲೆಕ್ಕಪರಿಶೋಧನೆಗಾಗಿಯೂ ಸಹ ಆದೇಶಿಸಬಹುದು.

(4) ಲೆಕ್ಕಪರಿಶೋಧಕನು, ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ, ಪ್ರಾಧಿಕಾರದ ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು.

(5) ಪ್ರಾಧಿಕಾರವು, ಲೆಕ್ಕಪತ್ರಗಳ ವಾರ್ಷಿಕ ಹೇಳಿಕೆಯನ್ನು ಮತ್ತು ಲೆಕ್ಕಪರಿಶೋಧಕನ ವರದಿಯನ್ನು ಸ್ವೀಕರಿಸಿದ ತರುವಾಯ, ಪ್ರತಿವರ್ಷದ ಜುಲೈ 15ರೊಳಗೆ, ತನ್ನ ಸಭೆಯಲ್ಲಿ ಅದನ್ನು ಪರಿಗಣಿಸತಕ್ಕದ್ದು ಮತ್ತು ವಾರ್ಷಿಕ ಲೆಕ್ಕಪತ್ರಗಳ ತ:ಖ್ತೆಯ ಹಾಗೂ ಲೆಕ್ಕಪರಿಶೋಧಕನ ವರದಿಯ ಪ್ರತಿಯನ್ನು, ಲೆಕ್ಕಪರಿಶೋಧಕನು ಮಾಡಿದ ಟೀಕೆಗಳೇನಾದರೂ ಇದ್ದಲ್ಲಿ, ಅದಕ್ಕೆ ನೀಡಿದ ತನ್ನ ವಿವರಣೆಯನ್ನು ಮತ್ತು ಲೆಕ್ಕಪರಿಶೋಧಕನು ಸೂಚಿಸಿದ ಅಕ್ರಮತೆಗಳು ಅಥವಾ ಲೋಪದೋಷಗಳೇನಾದರೂ ಇದ್ದಲ್ಲಿ, ಅವುಗಳ ಪರಿಹಾರೋಪಾಯಕ್ಕಾಗಿ ಪ್ರಾಧಿಕಾರವು ಕೈಗೊಂಡ ಕ್ರಮದ ವಿವರಣೆಯೊಂದಿಗೆ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(6) ಸರ್ಕಾರವು, ಲೆಕ್ಕ ಪರಿಶೋಧಕನ ವರದಿಯನ್ನು ಮತ್ತು (5)ನೇ ಉಪಪ್ರಕರಣದ ಅಡಿಯಲ್ಲಿ ತನಗೆ ಸಲ್ಲಿಸಲಾದ ಇತರ ದಸ್ತಾವೇಜುಗಳನ್ನು ಪರಿಶೀಲಿಸಿದ ತರುವಾಯ, ಪ್ರಾಧಿಕಾರಕ್ಕೆ ತಾನು ಸೂಕ್ತವೆಂದು ಭಾವಿಸುವ ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**29. ವರದಿಗಳು.-** (1) ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ, ತನ್ನ ಕಾರ್ಯನಿರ್ವಹಣೆ ಬಗ್ಗೆ ವಾರ್ಷಿಕ ವರದಿಯೊಂದನ್ನು ತಯಾರಿಸತಕ್ಕದ್ದು ಮತ್ತು 28ನೇ ಪ್ರಕರಣದ ಅಡಿಯಲ್ಲಿನ ಇತರ ವರದಿಗಳೊಂದಿಗೆ ಅದನ್ನು ಸರ್ಕಾರದ ನೋಡಲ್ ಇಲಾಖೆಗೆ ಸಲ್ಲಿಸತಕ್ಕದ್ದು.

(2) ಪ್ರಾಧಿಕಾರವು ನಿಯಮಿಸಬಹುದಾದ ಅಂಥ ದಿನಾಂಕಕ್ಕಿಂತ ಮೊದಲು, ಅಂಥ ನಮೂನೆಯಲ್ಲಿ ಮತ್ತು ಅಂಥ ಅವಧಿಯ ಅಂತರಗಳಲ್ಲಿ, ನಿಯಮಿಸಲಾದ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(3) ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ ಮತ್ತು ವಾರ್ಷಿಕ ವರದಿಯನ್ನು ಸರ್ಕಾರವು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

(4) ಅನುಮೋದಿತ ಯೋಜನೆಯನ್ವಯ ಭೌತಿಕ ಮತ್ತು ಹಣಕಾಸು ನಿರ್ವಹಣಾ ವರದಿಯನ್ನು ಹಣಕಾಸು ವರ್ಷವು ಕೊನೆಗೊಂಡ ಎರಡು ತಿಂಗಳೊಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

## ಅಧ್ಯಾಯ – VI
## ಸಂಕೀರ್ಣ

**30. ಕೆಲವು ವ್ಯಕ್ತಿಗಳು ಸಾರ್ವಜನಿಕ ನೌಕರರಾಗಿರತಕ್ಕದ್ದು.-** ಪ್ರಾಧಿಕಾರದ ಎಲ್ಲ ಸದಸ್ಯರು, ಅಧಿಕಾರಿಗಳು ಮತ್ತು ನೌಕರರನ್ನು, ಅವರು ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾದಾಗ ಅವರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರು ಎಂಬುದಾಗಿ ಭಾವಿಸತಕ್ಕದ್ದು.

**31. ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.-** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**32. ಕರ್ತವ್ಯ ನಿರ್ವಹಣೆಯಲ್ಲಿ ಲೋಪ.-** (1) ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ವಿಧಿಸಲಾದ ಯಾವುದೇ ಕರ್ತವ್ಯದ ನಿರ್ವಹಣೆಯನ್ನು ಪ್ರಾಧಿಕಾರವು ಮಾಡಿಲ್ಲ ಎಂದು ರಾಜ್ಯ ಸರ್ಕಾರಕ್ಕೆ ಮನವರಿಕೆಯಾದರೆ, ಅದು ತಾನು ಸೂಕ್ತವೆಂದು ಭಾವಿಸುವ ಕ್ರಮವನ್ನು ಕೈಗೊಳ್ಳತಕ್ಕದ್ದು.

(2) ಯೋಜನೆಯಲ್ಲಿ ಅನುಮೋದಿಸಲಾದ ಅಂಥ ಕರ್ತವ್ಯ ನಿರ್ವಹಣೆ ಮಾಡುವಲ್ಲಿ ಪ್ರಾಧಿಕಾರವು ವಿಫಲವಾಗಿದೆ ಅಥವಾ ನಿರ್ಲಕ್ಷ್ಯ ತೋರಿದೆ ಎಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, 3ನೇ ಪ್ರಕರಣದಲ್ಲಿ ಏನೇ ಇದ್ದರೂ, ಪ್ರಾಧಿಕಾರವನ್ನು ರದ್ದುಗೊಳಿಸುವುದು ಮತ್ತು ಅದನ್ನು ನಿಯಮಿಸಲಾದಂಥ ರೀತಿಯಲ್ಲಿ ಪುನಃ ರಚಿಸುವುದು ರಾಜ್ಯ ಸರ್ಕಾರಕ್ಕೆ ಕಾನೂನುಸಮ್ಮತವಾಗಿರತಕ್ಕದ್ದು.

(3) ಪ್ರಾಧಿಕಾರವನ್ನು ರದ್ದುಪಡಿಸಿದ ತರುವಾಯ ಮತ್ತು ಅದನ್ನು ಪುನಾರಚಿಸುವವರೆಗೆ ಈ ಅಧಿನಿಯಮದ ಅಡಿಯಲ್ಲಿನ ಪ್ರಾಧಿಕಾರದ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ಸರ್ಕಾರ ಅಥವಾ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ನೇಮಕ ಮಾಡಬಹುದಾದ ಅಂಥ ಅಧಿಕಾರಿ ಅಥವಾ ಅಧಿಕಾರಿಗಳು ನಿರ್ವಹಿಸತಕ್ಕದ್ದು. ಅಂಥ ಅಧಿಕಾರಿಯನ್ನು "ಆಡಳಿತಗಾರ" ಎಂದು ಪದನಾಮೀಕರಿಸತಕ್ಕದ್ದು.

**33 ಪ್ರಾಧಿಕಾರದ ವಿಘಟನೆ.-** (1) ಸರ್ಕಾರವು, ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ, ಪ್ರಾಧಿಕಾರವು ವಿಘಟಿತವಾಗತಕ್ಕದ್ದೆಂದು ಘೋಷಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಪ್ರಾಧಿಕಾರದಲ್ಲಿ ನಿಹಿತವಾದ ಮತ್ತು ಅದರಿಂದ ವಸೂಲಾಗತಕ್ಕ ಎಲ್ಲ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು ವಸೂಲಿ ಮಾಡಬಹುದಾಗಿರತಕ್ಕದ್ದು.

**34. ಸರ್ಕಾರದ ಸಾಮಾನ್ಯ ಆಡಳಿತಾತ್ಮಕ ನಿಯಂತ್ರಣ.-** (1) ಪ್ರಾಧಿಕಾರದ ಎಲ್ಲ ಕಾರ್ಯಚಟುವಟಿಕೆಗಳು ಮತ್ತು ವ್ಯವಹಾರಗಳ ಮೇಲೆ ಸರ್ಕಾರವು ಸಾಮಾನ್ಯ ಆಡಳಿತಾತ್ಮಕ ನಿಯಂತ್ರಣ ಮತ್ತು ಪರಿವೀಕ್ಷಣೆ ಹೊಂದಿರತಕ್ಕದ್ದು.

(2) ಸರ್ಕಾರವು, ಪ್ರಾಧಿಕಾರದ ಆಯುಕ್ತರ ಅಥವಾ ಪ್ರಾಧಿಕಾರದ ಅಧೀನದ ಯಾವೊಬ್ಬ ಅಧಿಕಾರಿಯ ಯಾವುವೇ ವ್ಯವಹರಣೆಗಳ ದಾಖಲೆಗಳನ್ನು, ಅಂಥ ವ್ಯವಹರಣೆಗಳ ಯಥಾರ್ಥತೆ, ಕಾನೂನು ಬದ್ಧತೆ ಅಥವಾ ಔಚಿತ್ಯಗಳ ಬಗ್ಗೆ ತಾನು ಸಮಾಧಾನಪಡುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅದಕ್ಕೆ ಸಂಬಂಧಿಸಿದಂತೆ ಅಂಥ ಆದೇಶವನ್ನು ಹೊರಡಿಸತಕ್ಕದ್ದು:

ಪರಂತು, ಸರ್ಕಾರದ ಆದೇಶದಿಂದ ಬಾಧಿತರಾದ ವ್ಯಕ್ತಿಗಳಿಗೆ ಯುಕ್ತ ಕಾಲಾವಕಾಶವನ್ನು ನೀಡಿದ ಹೊರತು ಸರ್ಕಾರವು ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ ಅಥವಾ ಮಾರ್ಪಡಿಸತಕ್ಕದ್ದಲ್ಲ ಅಥವಾ ರದ್ದುಪಡಿಸತಕ್ಕದ್ದಲ್ಲ.

**35. ನಿರ್ದೇಶನಗಳನ್ನು ನೀಡುವುದಕ್ಕೆ ಸರ್ಕಾರದ ಅಧಿಕಾರ.–** ವಿಶೇಷ ಸಂದರ್ಭದಲ್ಲಿ, ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಆಚರಣೆಗೆ ತರುವುದಕ್ಕಾಗಿ ತಾನು ಅವಶ್ಯಕ ಮತ್ತು ಸಮಯೋಚಿತವೆಂದು ಅಭಿಪ್ರಾಯ ಪಡುವಂಥ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ಕೊಡಬಹುದು ಮತ್ತು ಸಲಹಾ ಸಮಿತಿಯ ಗಮನಕ್ಕೆ ತಂದ ತರುವಾಯ ಅಂಥ ನಿರ್ದೇಶನಗಳನ್ನು ಪಾಲಿಸುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**36. ತೊಂದರೆಗಳ ನಿವಾರಣೆ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು ಆ ತೊಂದರೆಯ ನಿವಾರಣೆಗಾಗಿ, ತಾನು ಅವಶ್ಯಕ ಮತ್ತು ಸಮಯೋಚಿತವೆಂದು ಅಭಿಪ್ರಾಯಪಡುವಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ಮಾಡಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ಮೇಲೆ ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಎಲ್ಲಾ ಆದೇಶಗಳನ್ನು ಆದಷ್ಟು ಬೇಗನೇ ರಾಜ್ಯದ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**37. ಅಧಿನಿಯಮವು ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರುವುದು.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅದಕ್ಕೆ ಅಸಂಗತವಾಗದಂತೆ ಏನೇ ಒಳಗೊಂಡಿದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**38. ಅನುಸೂಚಿಯ ತಿದ್ದುಪಡಿಗೆ ಅಧಿಕಾರ.–** (1) ಸರ್ಕಾರವು, ಅಧಿಸೂಚನೆಯ ಮೂಲಕ, ಅನುಸೂಚಿಯ ಯಾವುವೇ ನಮೂದುಗಳನ್ನು ಸೇರಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಬಿಟ್ಟುಬಿಡಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸತಕ್ಕದ್ದು.

**39. ನಿಯಮಗಳ ರಚನಾಧಿಕಾರ.–** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮ ಅಥವಾ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮ ಅಥವಾ ಅಧಿಸೂಚನೆಯ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯ ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮ ಅಥವಾ ಅಧಿಸೂಚನೆಯ ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**40. ವಿನಿಯಮಗಳ ರಚನಾಧಿಕಾರ.–** ಪ್ರಾಧಿಕಾರವು, ಅಧಿಸೂಚನೆಯ ಮೂಲಕ ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಈ ಅಧಿನಿಯಮದ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಸಮರ್ಥಗೊಳಿಸುವುದಕ್ಕಾಗಿ ಈ ಅಧಿನಿಯಮದ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಂತೆ ವಿನಿಯಮಗಳನ್ನು ರಚಿಸಬಹುದು. ವಿನಿಯಮಗಳ ಮೂಲಕ ಉಪಬಂಧಗಳನ್ನು ಕಲ್ಪಿಸಬೇಕೆಂದು ಪ್ರಾಧಿಕಾರವು ಅಭಿಪ್ರಾಯಪಟ್ಟಲ್ಲಿ ಅಗತ್ಯವಾಗಬೇಕಾದ ಅಥವಾ ಅಗತ್ಯವಾಗಬಹುದಾದ ಯಾವುದೇ ವಿಷಯದ ಸಂಬಂಧದಲ್ಲಿ ವಿನಿಯಮಗಳನ್ನು ರಚಿಸತಕ್ಕದ್ದು.

**41. ತಾತ್ಕಾಲಿಕ ಉಪಬಂಧಗಳು.–** (1) ದಿನಾಂಕ: 23.04.1997ರ ಆದೇಶ ಸಂಖ್ಯೆ: 12/97–98ರ ಅನುಸಾರ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಅಡಿಯಲ್ಲಿ ನೋಂದಾಯಿತವಾದ ಪಿಲಿಕುಳ ನಿಸರ್ಗಧಾಮ ಸೊಸೈಟಿ ಅಡಿಯಲ್ಲಿ ಮಾಡಲಾದ ಅಥವಾ ಹೊರಡಿಸಲಾದ ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕವು ಮತ್ತು ದಿನಾಂಕ: 23.08.2005ರ ಆದೇಶ ಸಂಖ್ಯೆ: 95/05–06 ಅನ್ವಯ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಅಡಿಯಲ್ಲಿ ನೋಂದಾಯಿತವಾದ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈ ಇವುಗಳ ಮತ್ತು ಸರ್ಕಾರವು ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ಘೋಷಿಸುವ ಅಂಥ ಇತರ ಪ್ರದೇಶ; ಅಥವಾ ಅನ್ಯಥಾ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಅಥವಾ ಅದಕ್ಕೆ ಸಂಬಂಧಿಸಿದ ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ, ಈ ಅಧಿನಿಯಮದ ಉಪಬಂಧಗಳಿಗೆ ಅವು ಅಸಂಗತವಾಗದಿರುವಷ್ಟು ಮಟ್ಟಿಗೆ, ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಅವುಗಳನ್ನು ಮಾಡಲಾಗಿದೆಯೋ ಅಥವಾ ಹೊರಡಿಸಲಾಗಿದೆಯೋ ಅಥವಾ ಗೊತ್ತುಪಡಿಸಲಾಗಿದೆಯೋ ಎಂಬಂತೆ ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮ ಅಥವಾ ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ಗೊತ್ತುಪಡಿಸುವಿಕೆ ಮೂಲಕ ಅನ್ಯಥಾ ಮತ್ತು ರದ್ದುಪಡಿಸುವವರೆಗೆ ಪರಿಣಾಮಕಾರಿಯಾಗಿರತಕ್ಕದ್ದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಸೊಸೈಟಿಯ ಚರ ಮತ್ತು ಸ್ಥಿರ ಸ್ವತ್ತುಗಳ ಮಾಲೀಕತ್ವ, ಆಡಳಿತ ಮತ್ತು ಸಂಪೂರ್ಣ ವ್ಯವಸ್ಥಾಪನೆಯು ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ಅಸ್ತಿತ್ವದಲ್ಲಿರುವ ಡಾ: ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಸೊಸೈಟಿ ಮತ್ತು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರವು ಇನ್ನು ಮುಂದೆ ವಿಘಟನೆಯಾತಕ್ಕದ್ದು ಮತ್ತು ಹಣಕಾಸು ಒಳಗೊಂಡಂತೆ ಎಲ್ಲಾ ಚರ ಮತ್ತು ಸ್ಥಿರ ಸ್ವತ್ತುಗಳು, ಎಲ್ಲಾ ಆಸ್ತಿಗಳು ಮತ್ತು ಹಣಕಾಸು, ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಪ್ರಾಧಿಕಾರದ ಸ್ವತ್ತುಗಳು, ಹಣಕಾಸು, ಆಸ್ತಿಗಳು ಮತ್ತು ಹೊಣೆಗಾರಿಕೆಯಾಗತಕ್ಕದ್ದು.

**ಅನುಸೂಚಿ**

(2ನೇ ಪ್ರಕರಣದ (ಒ) ಖಂಡವನ್ನು ನೋಡಿ)

(1) ಮೂಡುಶೆಡ್ಡೆ ಮತ್ತು ತಿರುವೈಲ್ ಗ್ರಾಮ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಭೂಮಿಯ 356 ಎಕರೆಗಳು ಮತ್ತು 20.50 ಸೆಂಟ್‌ಗಳ ಪ್ರದೇಶ (ಕರ್ನಾಟಕ ಸರ್ಕಾರದಿಂದ ಭೋಗ್ಯದ ಮೇಲೆ)
ಉತ್ತರ–ಮೂಡುಶೆಡ್ಡೆ ಗ್ರಾಮ ಸರ್ವೆ ನಂ. 76(ಪಿ), 89(1)(ಪಿ), 65(ಪಿ), 83.2, 74– 1ಎ1
ಪೂರ್ವ– ತಿರುವೈಲ್ ಗ್ರಾಮ ಸರ್ವೆ ನಂ. 98–ಪಿ, 97, 85, 98, 99
ದಕ್ಷಿಣ–ತಿರುವೈಲ್ ಮತ್ತು ಪಚನಾಡಿ ಗ್ರಾಮದ ಗಡಿ
ಪಶ್ಚಿಮ– ಮೂಡುಶೆಡ್ಡೆ ಗ್ರಾಮ ಸರ್ವೆ ನಂ. 36(ಪಿ), 104, 86(ಪಿ)

(2) ಗುರುಪುರ ನದಿಯ ದಂಡೆಯಲ್ಲಿನ 0.75 ಎಕರೆಗಳ ವಿಸ್ತೀರ್ಣದಷ್ಟು ಪಂಪ್ ಹೌಸ್

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಕೆ.ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 650